ವಿಜಯಪುರ | ಸಂಪುಟ 01 | ಸಂಚಿಕೆ 299 | ಪುಟ 4 | ₹ 3.00

https://udayarashminews.com

udayarashmi 7026028778


# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಬುಧವಾರ, ಜನವರಿ 24, 2024



“ಕಾಂಗ್ರೆಸ್ ನಾಯಕ ವೀರಪ್ಪ ಮೊಯ್ಲಿ ಮೋದಿ ಅವರ 11ದಿನದ ಉಪವಾಸವನ್ನು ಲೇವಡಿ ಮಾಡಿರುವುದು ಖಂಡನೀಯ. ಸಾಧಿಸುವ ಛಲ, ಧೃಡ ಸಂಕಲ್ಪವಿದ್ದರೆ, 11 ದಿನ ಉಪವಾಸ ಮಾಡುವುದು ಅಸಾಧ್ಯವೇನಲ್ಲ ಎಂಬುದು ವೈದ್ಯಕೀಯ ಲೋಕದಲ್ಲಿ ಸಾಬೀತಾಗಿದೆ.

– ಡಾ.ಗೌತಮ್.ಆರ್.ಚೌಧರಿ
ಬಿಜೆಪಿ ಮುಖಂಡರು, ಸಿಂದಗಿ

ದಿ.ಕರ್ಪೂರಿ ಠಾಕೂರ್ ಬಿಹಾರದ ಮಾಜಿ ಸಿಎಂ | ಪ್ರಧಾನಿ ಮೋದಿ ಅಭಿನಂದನೆ | ಜೆಡಿಯುದಿಂದ ಮೋದಿ ಸರ್ಕಾರಕ್ಕೆ ಕೃತಜ್ಞತೆ

# ದಿ.ಕರ್ಪೂರಿ ಠಾಕೂರ್‌ಗೆ ‘ಭಾರತ ರತ್ನ’ ಪ್ರಶಸ್ತಿ!

ನವದೆಹಲಿ: ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ ಪ್ರತಿಷ್ಠಿತ ‘ಭಾರತ ರತ್ನ’ ಪ್ರಶಸ್ತಿ ನೀಡುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ.

ಕರ್ಪೂರಿ ಠಾಕೂರ್ ಅವರಿಗೆ ಮರಣೋತ್ತರವಾಗಿ ಭಾರತ ರತ್ನ ನೀಡಲಾಗುತ್ತಿದೆ. ಬುಧವಾರ ಕರ್ಪೂರಿ ಠಾಕೂರ್ ಅವರ 100ನೇ ಜನ್ಮ ವರ್ಷಾಚರಣೆಗೂ ಮುನ್ನ ಅವರಿಗೆ ಭಾರತ ರತ್ನ ನೀಡಿ ಗೌರವಿಸುವುದಾಗಿ ಘೋಷಿಸಲಾಗಿದೆ.

ಕರ್ಪೂರಿ ಠಾಕೂರ್ ಅವರಿಗೆ ಭಾರತ ರತ್ನ ನೀಡಬೇಕೆಂದು ಜನತಾ ದಳ ಯುನೈಟೆಡ್ (ಜೆಡಿಯು) ಒತ್ತಾಯಿಸಿತ್ತು. ಈ ಘೋಷಣೆಯ ನಂತರ ಜೆಡಿಯು ಮೋದಿ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದೆ.

36 ವರ್ಷಗಳ ತಪಸ್ಸಿನ ಫಲ ನಮಗೆ ಸಿಕ್ಕಿದೆ ಎಂದು ಕರ್ಪೂರಿ ಠಾಕೂರ್ ಅವರ ಪುತ್ರ ರಾಮನಾಥ್ ಠಾಕೂರ್ ಹೇಳಿದ್ದಾರೆ. ನನ್ನ ಕುಟುಂಬ ಮತ್ತು ಬಿಹಾರದ 15 ಕೋಟಿ ಜನರ ಪರವಾಗಿ ನಾನು ಸರ್ಕಾರಕ್ಕೆ ಧನ್ಯವಾದ ಹೇಳಲು ಬಯಸುತ್ತೇನೆ ಎಂದರು.

ಕರ್ಪೂರಿ ಠಾಕೂರ್ ಗೆ ಭಾರತ ರತ್ನ ಸಿಕ್ಕಿರುವುದಕ್ಕೆ ಪ್ರಧಾನಿ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ.

### ಬಿಹಾರದ ಜನನಾಯಕ ಕರ್ಪೂರಿ ಠಾಕೂರ್

1970ರ ದಶಕದಲ್ಲಿ ಕರ್ಪೂರಿ ಠಾಕೂರ್ ಎರಡು ಬಾರಿ ಬಿಹಾರದ ಮುಖ್ಯಮಂತ್ರಿಯಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಜೊತೆಗೆ ಶಿಕ್ಷಕರೂ ಆಗಿದ್ದರು. ಅವರು ಹಿಂದುಳಿದ ಸಮುದಾಯದಿಂದ ಬಂದವರು. ಮಂಡಲ ಚಳವಳಿಗೂ ಮುನ್ನ ಮುಖ್ಯಮಂತ್ರಿಯಾಗಿದ್ದಾಗ ಹಿಂದುಳಿದ ವರ್ಗದವರಿಗೆ ಶೇ.27ರಷ್ಟು ಮೀಸಲಾತಿ ನೀಡಿದ್ದರು. ಲೋಕನಾಯಕ್ ಜೈಪ್ರಕಾಶ್ ನಾರಾಯಣ್ ಮತ್ತು ರಾಮ್ ಮನೋಹರ್ ಲೋಹಿಯಾ ಇವರ ರಾಜಕೀಯ ಗುರುಗಳು.



ಜನಜಾಗೃತಿ ಮೂಡಿಸುವ ಬೀದಿ ನಾಟಕ ಪ್ರದರ್ಶನಕ್ಕೆ ಡಿಸಿ ಟಿ.ಭೂಬಾಲನ್ ಚಾಲನೆ

# ಜನಜಾಗೃತಿಗೆ ಬೀದಿ ನಾಟಕ ಪ್ರದರ್ಶನ ಪರಿಣಾಮಕಾರಿ ಸಂವಹನ

ವಿಜಯಪುರ: ರಾಜ್ಯ ಸರ್ಕಾರ ಜಾರಿಗೆ ತಂದಿರುವ ಮಹತ್ವಾಕಾಂಕ್ಷಿ ಐದು ಗ್ಯಾರಂಟಿ ಯೋಜನೆಗಳು ಸೇರಿದಂತೆ ಸರ್ಕಾರದ ವಿವಿಧ ಜನಪ್ರಿಯ ಹಾಗೂ ಜನಪರ ಯೋಜನೆಗಳ ಮಾಹಿತಿಯನ್ನು ಜನ–ರಿಗೆ ತಲುಪಿಸುವ ಮತ್ತು ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಬೀದಿ ನಾಟಕ–ಜಾನಪದ ಕಲಾ ತಂಡಗಳ ಪ್ರದರ್ಶನ ಪರಿಣಾಮಕಾರಿ ಸಂವಹನವಾಗಿವೆ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಹೇಳಿದರು.



ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಮಂಗಳವಾರ ಜಿಲ್ಲಾಧಿಕಾರಿಗಳಾದ ಟಿ.ಭೂಬಾಲನ್ ಅವರು ವಾದ್ಯ ನುಡಿಸುವ ಮೂಲಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕ್ಷೇತ್ರ ಪ್ರಚಾರದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರದ ಮಹತ್ವಾಕಾಂಕ್ಷಿ ಐದು ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಜ್ಯೋತಿ,ಅನ್ನಭಾಗ್ಯ, ಗೃಹಲಕ್ಷ್ಮಿ ಹಾಗೂ ಯುವ ನಿಧಿ ಯೋಜನೆಗಳನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಅರ್ಹ ನೈಜ ಫಲಾನುಭವಿಗಳಿಗೆ ಅವರ ಹಕ್ಕನ್ನು ಕಲ್ಪಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳು ಹಲವು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಗ್ಯಾರಂಟಿ ಯೋಜನೆಗಳ ಕುರಿತು ಜಾಗೃತಿ ಮೂಡಿಸಿ ಯೋಜನೆಗಳನ್ನು ಜನರಲ್ಲಿಗೆ ತಲುಪಿಲು ಪ್ರಯತ್ನಿಸಲಾಗುತ್ತಿದೆ. ಸಾರ್ವಜನಿಕರು ಸಹ ಸರ್ಕಾರ ಜಾರಿಗೊಳಿಸಿರುವ ವಿವಿಧ ಯೋಜನೆಗಳ ಮಾಹಿತಿ ಪಡೆದುಕೊಂಡು ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿಕೊಂಡರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರ ಮತ್ತು ಸಾರ್ವಜನಿಕರ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ರಾಜ್ಯ ಸರ್ಕಾರ ಜನರಿಗಾಗಿ ಜಾರಿಗೆ ತಂದಿರುವ ಯೋಜನೆಗಳ ಕು–ರಿತಾಗಿ ಜಾಗೃತಿ ಮೂಡಿಸುವಲ್ಲಿ ಈ ಕಲಾ ತಂಡಗಳು ಕಲೆಯೊಂದಿಗೆ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿಯನ್ನು ತಮ್ಮದೇ ಆದ ಹಾಡಿನ ಮೂಲಕ,ಸಂಭಾಷಣೆಯ ಮೂಲಕ ವಿಶಿಷ್ಟ ಹಾಗೂ ವೈಶಿಷ್ಟ್ಯ ಪೂರ್ಣ ಶೈಲಿಯಲ್ಲಿ ತಲುಪಿಸಲಿವೆ. . ನಗರ ಹಾಗೂ ಗ್ರಾಮೀಣ ಪ್ರದೇಶದ ಅರ್ಹ ಫಲಾನುಭವಿಗಳಿಗೆ ಸರ್ಕಾರದ ಯೋಜನೆಗಳನ್ನು ಯಥಾವತ್ತಾಗಿ ತಲುಪಿಸಲು ಸಂವಹನ ಮಾಧ್ಯಮವಾಗಿ ಬೀದಿನಾಟಕ ಮತ್ತು ಜಾನಪದ ಕಲಾತಂಡಗಳು, ಜನರಿಗೆ ಮನಮುಟ್ಟುವಂತೆ ತಿಳಿಸಿಕೊಡಲಿವೆ ಎಂದು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಅಮರೇಶ ದೊಡಮನಿ ಅವರು ಮಾತನಾಡಿ, ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಇಲಾಖೆಯಿಂದ ಬೀದಿ ನಾಟಕ ಹಾಗೂ ಜಾನಪದ ಕಲಾ ತಂಡಗಳು ಜಿಲ್ಲೆಯ ವಿವಿಧೆಡೆ ಸಂಚರಿಸಿ, ಬೀದಿ ನಾಟಕ ಹಾಗೂ ಜಾನಪದ ಸಂಗೀತದ ಮೂಲಕ ಸರ್ಕಾರದ ಯೋಜನೆಗಳ ಮಾಹಿತಿ ನೀಡಲಿವೆ ಎಂದು ಹೇಳಿದರು.

ಬೀದಿ ನಾಟಕ ತಂಡಗಳಾದ ವಿಶ್ವಚೇತನ ಕಲಾ ತಂಡ, ಗ್ರಾಮೀಣಾಭಿವೃದ್ಧಿ ಕಲಾ ತಂಡ ಹಾಗೂ ಜಾನಪದ ಕಲಾ ತಂಡಗಳಾದ ಸಿದ್ದಾಪುರದ ಗುರುಪ್ರಸಾದ ಜಾನಪದ ತಂಡಗಳು ಭಾಗವಹಿಸಿ ಸರ್ಕಾರದ ಯೋಜನೆಗಳ ಕುರಿತು ಪ್ರದರ್ಶನ ನೀಡಲಿವೆ. ಈ ಕಲಾ ತಂಡಗಳು ಜನವರಿ ಹಾಗೂ ಫೆಬ್ರವರಿ ಮಾಹೆಯಲ್ಲಿ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಸಂಚರಿಸಿ ಜಾಗೃತಿ ಮೂಡಿಸಲಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯು ಉಪ ನಿರ್ದೇಶಕ ಪುಂಡಲಿಕ ಮಾನವರ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ರಾಜಶೇಖರ ದೈವಾಡಿ, ವಾರ್ತಾ ಇಲಾಖೆಯ ಸುರೇಶ ಅಂಬಿಗೇರ,ಜಿಲ್ಲಾಧಿಕಾರಿ ಕಚೇರಿಯ ಎಂ.ಕೆ.ದೇಸಾಯಿ, ಎಸ್. ಎಸ್. ದಿವಟೆ, ಜಮಾದಾರ, ಮೇಟಿ, ಪಿ.ಜಿ.ಕವಟಗಿಮಠ, ಎಂ.ಡಿ.ಕರ್ನಾಳ, ಹಿರೇಮಠ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ರಾಜ ನುಡಿ

ಒಬ್ಬರ ಸೌಂದರ್ಯಕ್ಕಿಂತ ಅವರ ಸ್ವಾತಂತ್ರ್ಯದಲ್ಲಿ ನಂಬಿಕೆ ಇಟ್ಟವರು ಸುಂದರವಾಗಿ ಕಾಣುತ್ತಾರೆ. ಸುಂದರವಾಗಲು ಇನ್ನೊಬ್ಬರ ಸುಂದರವಾಗಲು ಇನ್ನೊಬ್ಬರ ಸ್ವಾತಂತ್ರ್ಯವನ್ನು ಗೌರವಿಸಿ.

–ಡಾ. ರಾಜಶೇಖರ ನಾಗೂರ



### ವಚನ ಚಿಂತನ 285

*ಲಿಂಗದ ಮಹಾಮಂಗಳ ಬೆಳಗು*

*ಅಯ್ಯಾ, ಈ ಮಹಾಘನವ ಕಾಂಬುದಕ್ಕೆಹಸಿವು*
*ಕೆಡಬೇಕು ತೃಷೆಯಡಗಬೇಕು,*
*ವ್ಯಸನ ನಿಲ್ಲಬೇಕು;ನಿದ್ರೆ ಹರಿಯಬೇಕು,*
*ಜೀವನ ಬುದ್ಧಿ ಹಿಂಗಬೇಕು,*
*ಮನ ಪವನ ಬಿಂದು ಒಡಗೂಡಬೇಕು*
*ಚಿತ್ತ ಒತ್ತಟ್ಟಿಗೆ ಹೋಗದಿರಬೇಕು.*
*ಹೊತ್ತು ಹೊತ್ತಿಗೆ ಉತ್ತರವನೇರಿ ಬೆಚ್ಚು ಬೇರಿಲ್ಲದೆ*
*ಲಿಂಗದೊಳಗೆ ಅಚ್ಚೊತ್ತಿದಂತೆ ಬೆರೆದಡೆ,*
*ಕತ್ತಲೆ ಹರಿವುದು, ಮರವೆ ಹಿಂಗುವುದು,*
*ನಿದ್ರೆ ಹರಿವುದು,*
*ಹಸಿವು ಕೆಡುವುದು, ತೃಷೆಯಡಗುವುದು,*
*ವ್ಯಸನ ನಿಲುವುದು.*
*ಇವೆಲ್ಲವನು ಹಿಂಗಿಸಿ ತಾ ಲಿಂಗವ್ಯಸನಿಯಾಗಬಲ್ಲಡೆ,*
*ಮುಂದೆ ಮಹಾಮಂಗಳದ ಬೆಳಗು ಕಾಣಿಪುದೆಂದರು*
*ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.*
*– ಲಿಂಗಮ್ಮನವರು*

ಆ ಮಂಗಳ ಮಹಾಬೆಳಗ ಕಾಣಲು ಕಲ್ಯಾಣದಶರಣರು ಅಂದು ಕೈಗೊಂಡ ಮಾರ್ಗವನ್ನು ಇಲ್ಲಿ ಲಿಂಗಮ್ಮನವರು ಸ್ಪಷ್ಟವಾಗಿ ವಿವರಿಸಿದ್ದಾರೆ. ಪ್ರಾರಂಭದಲ್ಲಿ ಹಸಿವು–ತೃಷೆ–ವ್ಯಸನ–ನಿದ್ರೆಗಳನ್ನು ನಿಯಂತ್ರಿಸಬೇಕು. ಭಾಹ್ಯಸಂಸಾರದ ವ್ಯಾಮೋಹ ಕಡಿಮೆಗೊಳಿಸಬೇಕು (ಜೀವನ ಬುದ್ಧಿ ಹಿಂಗಬೇಕು) ,ಇಷ್ಟಲಿಂಗದ ಮೇಲೆ ನೆಟ್ಟದೃಷ್ಟಿಯು ಚಂಚಲರಹಿತವಾಗಿರಬೇಕು ಉಸಿರು ಮನ ಒಂದಾಗಬೇಕು. ಲಿಂಗದ ಮೇಲಿನ ದೃಷ್ಟಿಯು ಅಂಗದೊಳಗಿನ ಅಂತರದೃಷ್ಟಿಯೊಂದಿಗೆ ಸಂಗಮಿಸಿದಾಗ ಅಂತರಂಗದ ಕತ್ತಲೆ ಹರಿದು ಅಲ್ಲಿ ಮಂಗಳ ಮಹಾಬೆಳಗಿನ ದರ್ಶನವಾಗುತ್ತದೆ. ಆಗ ಪ್ರಾರಂಭದಲ್ಲಿ ಪ್ರಸ್ತಾಪಿಸಿದ ಎಲ್ಲ ಮನೋಚಂಚಲ ಅಂಶಗಳು ದೂರವಾಗಿ ಬೆಳಗು ಆವರಿಸುವುದು, ಕಾರಣ ಅಂಗವ್ಯಸನಿಗಳಾಗದೆ ಲಿಂಗವ್ಯಸನಿಗಳಾಗಲು ಕೋರಿದ್ದಾರೆ. ಇದು ಇಷ್ಟಲಿಂಗದ ಮೂಲಕ ಮಹಾಬೆಳಗು ಕಾಣುವ ಪರಿ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

ಹೆದ್ದಾರಿ ತಡೆ | ಟೈರುಗಳಿಗೆ ಬೆಂಕಿ | ಸಂಚಾರ ಅಸ್ತವ್ಯಸ್ತ | ರೈತರ ಆಕ್ರೋಶ

# ಕಾಲುವೆಗಳಿಗೆ ನೀರು ಹರಿಸಲು ಆಗ್ರಹಿಸಿ ರೈತರ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ತಾಲುಕಿನ ಮಟ್ಟಿಹಾಳ ಗ್ರಾಮದಲ್ಲಿರುವ ಕೃಷ್ಣಾ ಭಾಗ್ಯ ಜಲನಿಗಮದ ಕಾರ್ಯಾಲಯಗಳ ಮುಂದೆ ಮುಳವಾಡ ಏತ ನೀರಾವ–ರಿಯ ಯೋಜನೆಯ ಮೂಲಕ ಪಶ್ಚಿಮ ಮತ್ತು ಪೂರ್ವ ಕಾಲುವೆಗಳಿಗೆ ತಕ್ಷಣವೇ ನೀರು ಹರಿಯಬಿಡಬೇಕು ಎಂದು ಆಗ್ರಹಿಸಿ ಭಾರತೀಯ ಜನತಾ ಪಕ್ಷ, ರೈತ ಸಂಘಟನೆ ಹಾಗೂ ಕರ್ನಾಟಕ ರಕ್ಷಣಾ ವೇದಿಕೆಯವರು ಮಂಗಳವಾರ ಧರಣಿ ಕೈಗೊಂಡರು.

ಬೀಳಗಿ ಬಾರಕೇಡ ರಾಜ್ಯ ಹೆದ್ದಾರಿಯ ಮಟ್ಟಿಹಾಳ ವೃತ್ತದಲ್ಲಿ ನೂರಾರು ರೈತರು ಸೇರಿ ಟೈರಗಳಿಗೆ ಬೆಂಕಿ ಹಚ್ಚಿ ಪ್ರತಿಭಟನೆ ಮಾಡಿದರು. ಸುಮಾರು 12ಘಂಟೆಯಿಂದ ಸಂಜೆ 5 ಘಂಟೆಯವರೆಗೆ ಹೆದ್ದಾರಿಯನ್ನು ನಾಲ್ಕು ಕಡೆ ಪೂರ್ಣಪ್ರಮಾಣದಲ್ಲಿ ಬಂದ್ ಮಾಡಿ, ಕಾಲುವೆಗಳಿಗೆ ನೀರು ಹರಿಸುವ ತನಕ ನಾವುಗಳು ಸುಮ್ಮನಿರುವದಿಲ್ಲ, ಅಧಿಕಾರಿಗಳು ಎಚ್ಚೆತ್ತುಕೊಂಡು ನೀರು ಬಿಡುವ ತನಕ ನಮ್ಮ ಹೋರಾಟ ನಿಲ್ಲುವದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ತುಳಸೀಗೇರಿ ಹಗೇದಾಳ ಮಾತನಾಡಿ, ಆಲಮಟ್ಟಿ ಆಣೆಕಟ್ಟಿನ ಹಿನ್ನೀರಿನಲ್ಲಿ ವಿಜಯಪೂರ ಜಿಲ್ಲೆಯ ರೈತವರ್ಗದವರು ಭೂಮಿ, ಊರು, ಮಠ ಮಾನ್ಯಗಳನ್ನು ಕಳೆದುಕೊಂಡು ತ್ಯಾಗ ಮಾಡಿದ್ದರೂ ಸರ್ಕಾರ ತಾರತಮ್ಯ ನೀತಿಯಿಂದ ನಮ್ಮ ಕೂಗಿಗೆ ಸ್ಪಂದನೆ ಮಾಡದೇ ಕಾಲುವೆಗಳಿಗೆ ನೀರು ಹರಿಸದೇ

ಇಬ್ಬಗೆ ನೀತಿ ಅನುಸರಿಸುತ್ತಿದೆ. ಇನ್ನಾದರೂ ನಮ್ಮನ್ನು ಪ್ರತಿನಿಧಿಸುವ ಜವಾಬ್ದಾರಿಯುತ ಸ್ಥಾನದಲ್ಲಿರುವ ನಾಯಕರು ಈ ಭಾಗದಲ್ಲಿ ನೀರು ಹರಿಸಲು ಅಧಿಕಾರಿಗಳ ಮೇಲೆ ಒತ್ತಡ ಹಾಕಬೇಕೆಂದು ಒತ್ತಾಯಿಸಿದರು.

ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲರು ತಮ್ಮ ಮತಕ್ಷೇತ್ರದ ಭಾಗದಲ್ಲಿ ಬರುವ ಕಾಲುವೆಗಳಿಗೆ ಕವಟಗಿ ಮತ್ತು ಕಾರಜೋಳ ಏತನೀರಾವರಿ ಮೂಲಕ ನೀರನ್ನು ಬಳಸಿಕೊಳ್ಳುತ್ತಿದ್ದು, ವಿಜಯಪೂರ ಜಿಲ್ಲೆಯಲ್ಲಿಯೇ ಬರುವ ಬಸವನ ಬಾಗೇವಾಡಿ ಮತಕ್ಷೇತ್ರದ ರೈತರಿಗೆ ಏಕೆ ಅನ್ಯಾಯ ಮಾಡುತ್ತಿದ್ದಾರೆ ಎನ್ನುವುದು ತಿಳಿಯದಾಗಿದೆ ಎಂದ ಅವರು, ಹಿಂಗಾರು ಮತ್ತು ಮುಂಗಾರು ಬೆಳೆಗಳಿಗೆ ನೀರು ಹರಿಸಬೇಕು ಎನ್ನುವ ಸರಕಾರದ ಆದೇಶವಿದ್ದರೂ ಪಾಲನೆ ಮಾಡದೇ ಇರುವದು ಜನಪ್ರತಿನಿಧಿಗಳ, ಅಧಿಕಾರಿಗಳ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ ಎಂದು ಆರೋಪಿಸಿದರು.

ಸುಪರಿಂಟೆಂಡ ಇಂಜಿನಿಯರ ಗೋವಿಂದ ರಾಠೋಡ ಸ್ಥಳಕ್ಕೆ ಆಗಮಿಸಿ, ನಮಗೆ ಕೆಲವು ದಿವಸಗಳ ಕಾಲ ಅವಕಾಶ ಕೊಡಬೇಕು. ಈಗಾಗಲೇ ನೀರಾವರಿ ಸಲಹಾ ಸಮೀತಿಯ ಉನ್ನತಮಟ್ಟದ ಅಧ್ಯಕ್ಷರು ಹಾಗೂ ಅಧಿಕಾರಿಗಳ ಮಟ್ಟದಲ್ಲಿ ಚರ್ಚೆ ನಡೆಯುತ್ತಿದ್ದು, ಸೂಚನೆ ಬಂದ ತಕ್ಷಣ ತಮ್ಮ ಮನವಿಗೆ ಸ್ಪಂದಿಸಿ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವದು ಎಂದು ಹೇಳಿದಾಗ ರೈತರು, ಕುರಿ ಕೇಳಿ ಮಸಾಲೆ ಅರಿಯಲು ಸಾಧ್ಯವಿಲ್ಲ, ಈ ಸಧ್ಯದಲ್ಲಿಯೇ ನೀರು ಹರಿಸಬೇಕು ಎನ್ನುವ ಒಕ್ಕೋರಲಿನ ಧ್ವನಿ ಅಧಿಕಾ–ರಿಗಳಿಗೆ ಎಚ್ಚರಿಸುವಂತಿತ್ತು.

ಸ್ಥಳಕ್ಕೆ ಕೊಲ್ಹಾರ ತಹಶೀಲ್ದಾರ ಎಸ್.ಎಸ್.ನಾಯ್ಕಲಮಠ, ಸಿಪಿಐ ಅಶೋಕ ಚವ್ಹಾಣ, ಪಿಎಸ್ಐ ಶ್ರೀಮತಿ ಎಸ.ಸಿ.ಗುರದಟ್ಟಿ, ಎಎಸ್ಐ ಎಚ್.ಎಸ್. ಗೌಡರ ಮತ್ತು ರೈತ ಮುಖಂಡರಾದ ಸೋಮು ಬಿರಾದಾರ. ಹಣಮಾಪೂರ ಗ್ರಾಮ ಪಂಚಾಯತ ಅಧ್ಯಕ್ಷ ಶ್ರೀಕಾಂತ ಗಣಿ, ಹಣಮಂತಗೌಡ ಬಿರಾದಾರ, ನಿಂಗನಗೌಡ ಪಾಟೀಲ, ಶ್ರೀಶೈಲ ನಾಗಿಡ್ಡಪ್ಪಗೋಳ, ಅಪ್ಪಸಿ ಮಟ್ಯಾಳ, ಮುತ್ತು ಕೊಟಬಾಗಿ, ದಶರಥ ಈಟಿ, ಸಗರೆಪ್ಪ ಮುರನಾಳ ಸೇರಿದಂತೆ ನೂರಾರು ರೈತರು ಪಾಲ್ಗೊಂಡಿದ್ದರು.

# ಬಿಜೆಪಿ ದ್ವೇಷ ರಾಜಕಾರಣ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕಾಂಗ್ರೆಸ್ ನಾಯಕ, ಸಂಸದ ಸದಸ್ಯ ರಾಹುಲ ಗಾಂಧಿ ನೇತೃತ್ವದ ಭಾರತ ಜೋಡೊ ನ್ಯಾಯಯಾತ್ರೆಯು ಆಸ್ಸಾಂನಲ್ಲಿ ಪ್ರವೇಶ ಮಾಡಿದಾಗ ಅಲ್ಲಿಯ ಬಿಜೆಪಿ ಸರಕಾರ ಕಾರ್ಯಕರ್ತರನ್ನು ಚೂಬಿಟ್ಟು ರ್‍ಯಾಲಿಯ ಮೇಲೆ ಕಲ್ಲು ತೂರಾಟ ನಡೆಸಿ ಹಲ್ಲೆ ಮಾಡಿರುವುದನ್ನು ಖಂಡಿಸಿ ವಿಜಯಪುರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಡಾ.ಬಿ.ಆರ್. ಅಂಬೇಡ್ಕರ ವೃತ್ತದಲ್ಲಿ ಮಂಗಳವಾರ ಪ್ರತಿಭಟನೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಅಬ್ದುಲ್‌ಹಮೀದ ಮುಶ್ರೀಫ್, ಕೇಂದ್ರದ ಬಿಜೆಪಿ ಸರಕಾರ ಜನವಿರೋಧಿಯಾಗಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸೋಲುವ ಭೀತಿ ಎದುರಿಸುತ್ತಿದ್ದು, ಹತಾಶೆ ಮನೋಭಾವದಿಂದ ದ್ವೇಷ ರಾಜಕಾರಣ ಮಾಡಲು ಹೊರಟಿದೆ. ಆಸ್ಸಾಂನ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮುಖಾಂತರ ಬಿಜೆಪಿಯ ಗೂಂಡಾ ಕಾರ್ಯಕರ್ತರನ್ನು ಬಿಟ್ಟು ಭಾರತ ಜೋಡೋ ನ್ಯಾಯಯಾತ್ರೆಯ ನೇತೃತ್ವ ವಹಿಸಿರುವ ನಮ್ಮ ನಾಯಕ ರಾಹುಲ ಗಾಂಧಿರವರ ಮೇಲೆ ಕಲ್ಲು ತೂರಾಟ ನಡೆಸಿ ಹಲ್ಲೆ ಮಾಡಿರುವುದನ್ನು ನಾವು ಬಲವಾಗಿ ಖಂಡಿಸುತ್ತೇವೆ. ಜನ ನಿಮ್ಮ ಮುಖವಾಡವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು,



ಮುಂಬರುವ 2024ರ ಲೋಕಸಭಾ ಚುನಾವಣೆಯಲ್ಲಿ ತಕ್ಕಪಾಠ ಕಲಿಸಿ ಮನೆಗೆ ಕಳುಹಿಸುವುದು ಶತಸಿದ್ಧ ಎಂದು ಭವಿಷ್ಯ ನುಡಿದರು.

ಬಿಜೆಪಿ ದ್ವೇಷದ ರಾಜಕಾರಣವೇ ಇವರ ಪ್ರವೃತ್ತಿಯಾಗಿದೆ. ಆಸ್ಸಾಂ ಮುಖ್ಯಮಂತ್ರಿ ಜನವಿರೋಧಿಯಾಗಿದ್ದು ಅಲ್ಲಿನ ರಾಜ್ಯಪಾಲರು ತಕ್ಷಣ ಇವರ ಮೇಲೆ ಸೂಕ್ತ ಕ್ರಮ ಕೈಗೊಂಡು ಅವರನ್ನು ವಜಾಗೊಳಿಸಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ ವೈಜನಾಥ ಕರ್ಪೂರಮಠ, ಡಾ.ಗಂಗಾಧರ ಸಂಬಣ್ಣಿ, ಆಜಾದ ಪಟೇಲ, ವಿದ್ಯಾವತಿ ಅಂಕಲಗಿ, ಬಲರಾಮ ನಾಯಕ, ಆರತಿ ಶಹಾಪೂರ, ಶಬ್ಬೀರ ಜಾಗೀರದಾರ ಮುಂತಾದವರು ಮಾತನಾಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ ಚಾಂದಸಾಬ ಗಡಗಲಾವ, ಡಾ.ರವಿ ಬಿರಾದಾರ, ಪ್ರಧಾನ ಕಾರ್ಯದರ್ಶಿಗಳಾದ ವಸಂತ ಹೊನಮೊಡೆ, ಹೊನಮಲ್ಲ ಸಾರವಾಡ ಸೇರಿದಂತೆ ಹಲವರಿದ್ದರು.

## ಜಲಜೀವನ ಮಿಶನ್ ಯೋಜನೆ । ಎಂಎಲ್ಸಿ ಸುನೀಲಗೌಡ ಅಧಿಕಾರಿಗಳಿಗೆ ಸೂಚನೆ

# ಗ್ರಾಮೀಣ ಭಾಗದ ಪ್ರತಿ ಮನೆಗೂ ನಳ ಸಂಪರ್ಕ ಒದಗಿಸಿ

ಉದಯರಶ್ಮಿ ನ್ಯೂಸ್

ವಿಜಯಪುರ: ಜಲಜೀವನ ಮಿಶನ್ ಯೋಜನೆ ಅನುಷ್ಠಾನ ಸಂದರ್ಭದಲ್ಲಿ ಗ್ರಾಮೀಣ ಭಾಗದ ಪ್ರತಿಯೊಂದು ಮನೆಗಳಿಗೂ ನಳಗಳ ಸಂಪರ್ಕ ಒದಗಿಸಬೇಕು. ತಾಂತ್ರಿಕ ನೆಪಹೇಳಿ ಯಾವುದೇ ಕುಟುಂಬವನ್ನು ಕುಡಿಯುವ ನೀರಿನ ಸೌಲಭ್ಯದಿಂದ ವಂಚಿತರನ್ನಾಗಿ ಮಾಡಬಾರದು ಎಂದು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮಂಗಳವಾರ ವಿಜಯಪುರ ತಾಲೂಕಿನ ಹೊನಗನಹಳ್ಳಿ ಮತ್ತು ಬಬಲೇಶ್ವರ ತಾಲೂಕಿನ ಉಪ್ಪಲದಿನ್ನಿ, ಕಾತ್ರಾಳ ಹಾಗೂ ಅರ್ಜುಣಗಿ ಗ್ರಾಮಗಳಲ್ಲಿ ಜಲಜೀವನ್ ಮಿಶನ್ ಯೋಜನೆಯಡಿ ನಾನಾ ಗ್ರಾಮಗಳ ಮನೆ ಮನೆಗಳಿಗೆ ಕುಡಿಯುವ ನೀರು ಪೂರೈಸುವ ನಳಗಳ ಸಂಪರ್ಕ ಯೋಜನೆಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಹಲವಾರು ಗ್ರಾಮಗಳಲ್ಲಿ ತಾಂತ್ರಿಕ ಕಾರಣಗಳ ನೆಪವೊಡ್ಡಿ ಅನೇಕ ಮನೆಗಳಿಗೆ ನಳಗಳ ಸಂಪರ್ಕವನ್ನು ನಿರಾಕರಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು. ನಗರ ಪ್ರದೇಶದ ಜನರಿಗೆ ನೀಡಲಾಗುವ ರೀತಿಯಲ್ಲಿ ಗ್ರಾಮೀಣ ಭಾಗದ ಜನ-ರಿಗೂ ಮನೆಮನೆಗಳಿಗೆ ಕುಡಿಯಲು ನೀರು ಪೂರೈಸುವ ಈ ಮಹತ್ವಾಕಾಂಕ್ಷೆ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನವಾಗಬೇಕು. ಯಾವ ಕುಟುಂಬವೂ ಈ ಯೋಜನೆಯಿಂದ ವಂಚಿತರಾಗದಂತೆ ನಳಗಳ ಸಂಪರ್ಕ ಒದಗಿಸಲು ಜಾಗರೂಕತೆಯಿಂದ ಕೆಲಸ ಮಾಡಬೇಕು ಎಂದು ಅವರು ಹೇಳಿದರು.

ಈಗಾಗಲೇ ಎಲ್ಲ ಗ್ರಾಮಗಳಲ್ಲಿ ಸಿಸಿ ರಸ್ತೆ ನಿರ್ಮಿಸಲಾಗಿದೆ. ಆದರೆ, ಜಲಜೀವನ ಮಿಶನ್ ಅನುಷ್ಠಾನ ಸಂದರ್ಭದಲ್ಲಿ ನಳಗಳಗೆ ಸಂಪರ್ಕ ಒದಗಿಸಲು ಪೈಪುಗಳನ್ನು ಅಳವಡಿಸುವಾಗ ಜೆಸಿಬಿ ಮೂಲಕ ಈ ರಸ್ತೆಗಳನ್ನು ಅಗೆಯಬಾರದು. ಪೈಪು ಅಳವಡಿಸಲು ಅಗತ್ಯವಿರುವಷ್ಟು ಮಾತ್ರ ರಸ್ತೆಯನ್ನು ಅತ್ಯಾಧುನಿಕ ಯಂತ್ರೋಪಕರಣಗಳನ್ನು ಬಳಸಿ ಕಟ್ ಮಾಡಬೇಕು. ಪೈಪು ಅಳವಡಿಸಿದ ನಂತರ ಮತ್ತೆ ಆ ರಸ್ತೆಯಲ್ಲಿ ಅಗೆಯಲಾಗಿರುವ ಜಾಗವನ್ನು ಯಥ-ರೀತಿ ದುರಸ್ಥಿ ಮಾಡಿ ಕೊಡಬೇಕು. ಈ ಬಗ್ಗೆ ಗ್ರಾಮಸ್ಥರೂ ಕೂಡ ತಂತಮ್ಮ ಪ್ರದೇಶದಲ್ಲಿ ನಡೆಯುವ ಕಾಮಗಾರಿಯ ಬಗ್ಗೆ ಮುತುವರ್ಜಿ ವಹಿಸಬೇಕು. ಏನಾದರೂ ಸಮಸ್ಯೆ ಎದುರಾದರೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ಗಮನಕ್ಕೆ ತರಬೇಕು. ಅಲ್ಲದೇ, ಗ್ರಾಮ ಪಂಚಾಯಿತಿಗಳೂ ಕೂಡ ಈ ಕಾಮಗಾರಿಗಳು ಸಂಪೂರ್ಣಗೊಂಡ ನಂತರ ಮಾತ್ರ ಅವುಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳಬೇಕು ಎಂದು ಶಾಸಕರು ಸೂಚನೆ ನೀಡಿದರು.

ಮುಂದಿನ ಒಂದೂವರೆ ವರ್ಷದಲ್ಲಿ ಜಲಧಾರೆ ಯೋಜನೆಯಡಿ ಎಲ್ಲ ಗ್ರಾಮಗಳಿಗೆ ಕೃಷ್ಣಾ ನದಿಯಿಂದ ಕುಡಿಯುವ ನೀರು ಪೂರೈಕೆಯಾಗಲಿದೆ. ಇದರಿಂದ ಕುಡಿಯುವ ನೀರಿನ ಸಮಸ್ಯೆ ಬಗೆಹರಿದು, ಗ್ರಾಮೀಣ ಭಾಗದ ಜನರಿಗೂ ನಗರ ಪ್ರದೇಶಗಳಂತೆ ನದಿಯಿಂದ ಕುಡಿಯಲು ನೀರು ಲಭ್ಯವಾಗಲಿದೆ ಎಂದು ಸುನೀಲಗೌಡ ಪಾಟೀಲ ತಿಳಿಸಿದರು.



ಹೊನಗನಹಳ್ಳಿ ಕಾರ್ಯಕ್ರಮ

ವಿಜಯಪುರ ತಾಲೂಕಿನ ಹೊನಗನಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕರು ಹೊನಗನಹಳ್ಳಿಯ ರೂ. 1.70 ಕೋ., ಸವನಳ್ಳಿಯಲ್ಲಿ ರೂ. 97 ಲಕ್ಷ ಮತ್ತು ತೊನಶ್ಯಾಳ ಆರ್. ಸಿ. ಕೇಂದ್ರದ ರೂ. 20.02 ಲಕ್ಷ ವೆಚ್ಚದ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಹೊನಗನಹಳ್ಳಿ ಗ್ರಾ. ಪಂ. ಅಧ್ಯಕ್ಷ ನಚಿಕೇತ ಬಿದರಿ, ಮುಖಂಡರಾದ ಶಶಿಧರ ಬಿದರಿ, ಶಿವಯ್ಯ ಒಡೆಯರ, ಮಹಾಂತೇಶ ಹಳ್ಳಿ, ವಿ. ಆರ್. ಗೌಡರ, ರಾವುತ ಗಾಣಗೇರ, ಹಣಮಂತ ಹಚಡದ, ಬಸವರಾಜ ರೆಡ್ಡಿ ಮುಂತಾದವರು ಉಪಸ್ಥಿತರಿದ್ದರು.

ಉಪ್ಪದಿನ್ನಿ ಕಾರ್ಯಕ್ರಮ

ಬಬಲೇಶ್ವರ ತಾಲೂಕಿನ ಉಪ್ಪದಿನ್ನಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು, ಉಪ್ಪಲದಿನ್ನಿ ಗ್ರಾಮದ ರೂ. 81.65 ಲಕ್ಷ, ಹಂಚಿನಾಳ ಪಿ. ಎಂ. ಗ್ರಾಮದ ರೂ. 27.97 ಲಕ್ಷ ವೆಚ್ಚದ ಕಾಮಗಾರಿಗಳಿಗೆ ಭೂಮಿಪೂಜೆ ಮಾಡಿದರು.

ಈ ಸಂದರ್ಭದಲ್ಲಿ ಸಂಗಯ್ಯ ಹಿರೇಮಠ, ಚಂದ್ರಶೇಖರ ಪೂಜಾರಿ, ಸೋಮು ಬಿರಾದಾರ, ಸಿದ್ದಪ್ಪ ಬೀಳಗಿ, ಅಶೋಕಗೌಡ ಪಾಟೀಲ, ಮೌಲಾಸಾಬ ಜಾಗೀರದಾರ, ಚಾಂದಸಾಬ ಜಾಗೀರದಾರ, ದುಂಡಪ್ಪ ಕೋಲಕಾರ, ಶಮನಸಾಬ ಮುಳವಾಡ, ಮಲ್ಲಿಕಾರ್ಜುನ ರಾಜಂಗಳ. ಮಮದಾಪುರ ಗ್ರಾಂ. ಪಂ. ಅಧ್ಯಕ್ಷ ಮಲ್ಲಿಕಾರ್ಜುನ ಗಂಗೂರ, ಲಕ್ಷ್ಮಣ ತೇಲಿ ಮುಂತಾದವರು ಉಪಸ್ಥಿತ-ರಿದ್ದರು.

ಕಾತ್ರಾಳ ಕಾರ್ಯಕ್ರಮ

ಬಬಲೇಶ್ವರ ತಾಲೂಕಿನ ಕಾತ್ರಾಳ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕರು, ಕಾತ್ರಾಳ ಗ್ರಾಮದ ಬಿರಾದಾರ ವಸ್ತಿಯ ರೂ. 20.50 ಲಕ್ಷ, ಬೋಳಚಿಕ್ಕಲಗಿ ಗ್ರಾಮದ ಆಶ್ರಯ ಕಾಲನಿಯ ರೂ. 15.36 ಲಕ್ಷ ವೆಚ್ಚದಲ್ಲಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಗ್ರಾ. ಪಂ. ಅಧ್ಯಕ್ಷ ಮಲ್ಲಿಕಾರ್ಜನ ಅಂಗಡಿ, ಗ್ರಾ. ಪಂ. ಸದಸ್ಯರಾದ ಗುರಬಸು ತೇವರಟ್ಟಿ, ಕೆ. ಎಚ್. ನರಳೆ, ಮಹ್ಮಮದಸಾಬ ಜಮಾದಾರ, ವಿಠ್ಠಲ ಮಾದರ, ಮಲ್ಲಯ್ಯ ಹಿರೇಮಠ, ಸಿದ್ದು ತೋಟದ, ರಾಜು ಬಿರಾದಾರ, ಮುಖಂಡರಾದ ರಾಮನಿಂಗ ಕೂಕಟನೂರ, ಸದಾಶಿವ ಸಜ್ಜನ, ಸಯ್ಯದ ಅತ್ತಾರ, ಮುಂತಾದವರು ಉಪಸ್ಥಿತರಿದ್ದರು.

ಅರ್ಜುಣಗಿ ಕಾರ್ಯಕ್ರಮ

ಬಬಲೇಶ್ವರ ತಾಲೂಕಿನ ಅರ್ಜುಣ-ಗಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಸುನೀಲಗೌಡ ಪಾಟೀಲ ಅವರು, ಹೊಕ್ಕುಂಡಿ ಗ್ರಾಮದ ಹೊಕ್ಕುಂಡಿ ವಸ್ತಿಯ ರೂ. 31.50 ಲಕ್ಷ, ಅರ್ಜುಣಗಿ ಗ್ರಾಮದ ಮಡಿವಾಳ ವಸ್ತಿ(ತಂವಸೆ ವಸ್ತಿ)ಯ ರೂ. 24.32 ಲಕ್ಷ ಮತ್ತು ಅರ್ಜುಣಗಿ ಗ್ರಾಮದ ಹೆಬ್ಬಾಳಟ್ಟಿ ತೋಟದ ವಸ್ತಿ(ಪ್ರಧಾನಿ ವಸ್ತಿ)ಯಲ್ಲಿ ರೂ. 21.26 ಲಕ್ಷ ವೆಚ್ಚದಲ್ಲಿ ಕಾಮಗಾ-ರಿಗಳಿಗ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಅರ್ಜುಣಗಿ ಗ್ರಾ. ಪಂ. ಅಧ್ಯಕ್ಷ ರಫೀಕ ಸೋನಾರ, ಮುಖಂಡರಾದ ರಮೇಶ ದೇಸಾಯಿ, ಉಮಾಕಾಂತ ತಡಾಕೆ, ಅಶೋಕ ಕಾಖಂಡಕಿ, ಸಿದ್ದಪ್ಪ ಕಲಬೀಳಗಿ, ಗೈಬುಸಾಬ ಕೌಜಲಗಿ, ಮುದಕನಗೌಡ ಪಾಟೀಲ ಮುಂತಾದವರು ಉಪಸ್ಥಿತ-ರಿದ್ದರು.

# ಡಿಎಸ್ಎಸ್ ಕೂಡಲಗಿ ಗ್ರಾಮ ಘಟಕ ಆಯ್ಕೆ



ಉದಯರಶ್ಮಿ ನ್ಯೂಸ್

ಕೆಂಭಾವಿ: ಹೋಬಳಿಯ ಕೂಡಲಗಿ ಗ್ರಾಮದಲ್ಲಿ ಪ್ರೊ ಬಿ ಕೃಷ್ಣಪ್ಪನವರು ಸ್ಥಾಪಿಸಿದ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ಯಿಂದ ಗ್ರಾಮ ಘಟಕ ಆಯ್ಕೆ ಮಾಡಲಾಯಿತು ,

ಈ ಸಂದರ್ಭ ಜಿಲ್ಲಾ ಸಂಚಾಲಕ ನಿಂಗಣ್ಣ ಗೋನಲ್ ಮಾತನಾಡಿ, ಯುವಕರೆಲ್ಲರೂ ಶಿಕ್ಷಣವಂತರಾಗಬೇಕು , ಮೂಢ ನಂಬಿಕೆಯನ್ನು ತೊಲಗಿಸಬೇಕು, ಅಂಬೇಡ್ಕರ್ ಅವರು ಹಾಕಿಕೊಟ್ಟಂತ ಮಾರ್ಗದಲ್ಲಿ ನಡೆಯಬೇಕು. ಹಾಗೂ ಪ್ರೊ ಬಿ ಕೃಷ್ಣಪ್ಪನವರ ಮಾರ್ಗದಲ್ಲಿ ನಮ್ಮ ಹೋರಾಟ ಮುನ್ನಡೆಸಬೇಕೆಂದು ಕರೆ ನೀಡಿದರು ,

ಈ ವೇಳೆ ಸಮಿತಿಯ ಸ ಸಂಚಾಲಕರು ನಾಗರಾಜ್ ಹೋಕುಳಿ, ಧರ್ಮಣ್ಣ ಚಿಂಚೋಳಿ, ಸಾಯಬಣ್ಣ ಕೆಂಭಾವಿ ಹೋಬಳಿ ಸಂಚಾಲಕರು, ಸದಾಶಿವ ಬೊಮ್ಮನಹಳ್ಳಿ, ಭೀಮಣ್ಣ ಅಡ್ಡಡಗಿ ಚಂದಪ್ಪ ತಳಳ್ಳಿ ಇದ್ದರು.

ಆಯ್ಕೆಯಾದ ಪದಾಧಿಕಾರಿಗಳು

ಮಲ್ಲಪ್ಪ ನಡುವಿನಮನಿ ಗ್ರಾಮ ಘಟಕ ಸಂಚಾಲಕರು, ಸಹ ಸಂಚಾಲಕರಾಗಿ ಮಾರುತಿ ದೊಡಮನಿ, ಬಸಪ್ಪ ದೊಡಮನಿ, ಮಾನಪ್ಪ ಅಳಿಗೇರಿ, ನಂದಪ ದೊಡಮನಿ, ಶಿವು ಗುಡಿಮನಿ ಪ್ರಕಾಶ್ ಗುಡಿಮನಿ, ಯಮನಪ್ಪ ಗುಡಿಮನಿ, ಜಟ್ಟಪ್ಪ ರಬ್ನಹಳ್ಳಿ, ಮಾನಪ್ಪ ಗುಡಿಮನಿ, ಧರ್ಮಪ್ಪ ರಬ್ನಳ್ಳಿ ಭೀಮಪ್ಪ ಇತರ-ರಿದ್ದರು.

# ಉರ್ದು ಶಿಕ್ಷಕರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಚಿವರಿಗೆ ಮನವಿ

ಉದಯರಶ್ಮಿ ನ್ಯೂಸ್

ವಿಜಯಪುರ: ರಾಜ್ಯದ ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತರ ಶಾಲಾ ಅಭಿವೃದ್ಧಿಗಾಗಿ ಹಲವು ಬೇಡಿಕೆಗಳ ಈಡೇರಿಕೆಗಾಗಿ ವಿಜಯಪುರ ಜಿಲ್ಲಾ ಉರ್ದು ಶಿಕ್ಷಕರ ಸಂಘದ ಅಧ್ಯಕ್ಷ ಜುಬೇರ ಕೇರೂರ ನೇತೃತ್ವದ ತಂಡವು ಸಿಎಂ ಸಿದ್ದರಾಮಯ್ಯ ಅವರಿಗೆ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಮೂಲಕ ಮನವಿ ಸಲ್ಲಿಸಿದರು.



ಚಿತ್ರದುರ್ಗ ನಗರದ ತರಾಸು ರಂಗಮಂದಿರದಲ್ಲಿ ಮಂಗಳವಾರ ನಡೆದ ಕರ್ನಾಟಕ ರಾಜ್ಯ ಉರ್ದು ಟಿಚರ್ಸ ಅಸೋಸಿಯೇಷನ್ ವತಿಯಿಂದ ನಡೆದ ರಾಜ್ಯ ಮಟ್ಟದ ಉರ್ದು ಪ್ರಾಥಮಿಕ ಶಾಲಾ ಶಿಕ್ಷಕರ ಕಾರ್ಯಾಗಾರ ಹಾಗೂ ಫಾತೀಮಾ ಶೇಖ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮನವಿ ಸಲ್ಲಿಸಿ ಮಾತನಾಡಿದ ಅವರು, ರಾಜ್ಯಾದ್ಯಂತ ಉರ್ದು ಮಾಧ್ಯಮ ಶಾಲೆಗಳಲ್ಲಿ ಆಂಗ್ಲ ಭಾಷಾ ಶಿಕ್ಷಕರ ಹುದ್ದೆ ಹಾಗೂ ದೈಹಿಕ ಶಿಕ್ಷಕರ ಹುದ್ದೆ ನೀಡುವಾಗ ಉರ್ದು ಭಾಷೆ ಬಲ್ಲ ಶಿಕ್ಷಕರಿಗೆ ನಿಯುಕ್ತಿಗೊಳಿಸುವದು. ಏಕೆಂದರೆ ದೈಹಿಕ ವಿಷಯ ಪಠ್ಯ ಪುಸ್ತಕ ಉರ್ದು ಶಾಲೆಯಲ್ಲಿ ಉರ್ದು ಭಾಷೆಯಲ್ಲಿ ಮುದ್ರಿತವಾಗಿರುತ್ತದೆ. ಉರ್ದು ಶಾಲೆಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ರಾಜ್ಯದ ಪ್ರತಿ ತಾಲ್ಲೂಕಿನ ಬಿ.ಇ.ಓ. ಕಾರ್ಯಾಲಯದಲ್ಲಿ ಒಂದು ಇ.ಸಿ.ಓ. ಹಾಗೂ ಬಿ.ಆರ್.ಸಿ. ಕಾರ್ಯಾಲಯದಲ್ಲಿ ಒಂದು ಬಿ.ಆರ್.ಪಿ. ಹುದ್ದೆ ಪ್ರತ್ಯೇಕವಾದ ಮಂಜೂರಿ ನೀಡಬೇಕು ಎಂದರು.

ರಾಜ್ಯದ ಎಲ್ಲಾ ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತರ ಭಾಷಾ ಶಾಲೆಗಳಲ್ಲಿ ಆಧುನಿಕ ತಂತ್ರಜ್ಞಾನ (ಸ್ಮಾರ್ಟ ಕ್ಲಾಸ್) ಸೌಲಭ್ಯ, ಪ್ರತಿ ಕಿರಿಯ ಪ್ರಾಥಮಿಕ ಶಾಲೆಗೆ ಐದು ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ 10 ಗಣಕಯಂತ್ರಗಳನ್ನು ಒದಗಿಸುವದು. ರಾಜ್ಯಾದ್ಯಂತ ಪ್ರತಿ ಜಿಲ್ಲೆಗೊಂದು ಜಿಲ್ಲಾ ಕೇಂದ್ರದಲ್ಲಿ ಒಂದು ಉರ್ದು ಭವನ ನಿರ್ಮಿಸುವದು. ಅಲ್ಪ ಸಂಖ್ಯಾತರ ಮಕ್ಕಳಿಗೆ ಈಗಾಗಲೇ ನೀಡುತ್ತಿರುವ ರೂ.1000 ಶಿಷ್ಯವೇತನವನ್ನು ರು. 5000ಕ್ಕೆ ಹೆಚ್ಚಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಈ ಸಂದರ್ಭದಲ್ಲಿ ಉರ್ದು ಶಿಕ್ಷಕರ ಸಂಘದ ಜಿಲ್ಲಾ ಖಜಾಂಚಿ ಅಜರ ಮುಲ್ಲಾ, ವಿಜಯಪುರ ನಗರದ ಉರ್ದು ಸಂಘದ ಅಧ್ಯಕ್ಷ ಬಶೀರ ನದಾಫ್, ವ ಗ್ರಾಮೀಣ ವಲಯದ ಕಾರ್ಯದರ್ಶಿ ಅಶ್ಪಾಕ ಬಾಲಸಿಂಗ್, ರಿಯಾಜ್ ತಮದಡ್ಡಿ, ಎ.ಕೆ.ಬಾಗವಾನ ಉಪಸ್ಥಿತರಿದ್ದರು.

# ಭೂನ್ಯಾಯ ಮಂಡಳಿಗೆ ಸದಸ್ಯರ ನೇಮಕ

ಉದಯರಶ್ಮಿ ನ್ಯೂಸ್

ವಿಜಯಪುರ: ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರ ಪ್ರಸ್ತಾವನೆಯಂತೆ, ವಿಜಯಪುರ ತಾಲ್ಲೂಕಿನ ಭೂ ನ್ಯಾಯ ಮಂಡಳಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿ ಸರ್ಕಾರ ಆದೇಶಿಸಿದೆ.

ವಿಜಯಪುರ ನಗರ ಮತಕ್ಷೇತ್ರ ವ್ಯಾಪ್ತಿಯ ದಾದಾಸಾಹೇಬ ಸಿದ್ದಪ್ಪ ಬಾಗಾಯತ (ಪರಿಶಿಷ್ಟ ಜಾತಿ), ಗುರುರಾಜ ಚೆನ್ನಪ್ಪ ಯಡವಣ್ಣವರ, ಶರಣಪ್ಪ ಬಸಪ್ಪ ಕಾಖಂಡಕಿ, ಬಸವರಾಜ ಷಡಕ್ಷರಪ್ಪಾ ಹೆರಲಗಿ (ಸಾಮಾನ್ಯ ವರ್ಗ) ಅವರನ್ನು ನೇಮಕ ಮಾಡಲಾಗಿದೆ.

# ರಾಮೋತ್ಸವ: ಮುದ್ದೇಬಿಹಾಳ ತಾಲೂಕಿನಲ್ಲಿ ಹಬ್ಬದ ವಾತಾವರಣ

ಉದಯರಶ್ಮಿ ನ್ಯೂಸ್

- ಚೇತನ ಶಿವಶಿಂಪಿ

ಮುದ್ದೇಬಿಹಾಳ: ಸರಿಸುಮಾರು 5 ದಶಕಗಳ ನಂತರ ಅಯೋಧ್ಯೆ ನಗರಿಯಲ್ಲಿ ನಿರ್ಮಾಣವಾದ ರಾಮ ಮಂದಿರದಲ್ಲಿ ಶ್ರೀ ರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆಯಾಗುತ್ತಿರುವ ಹಿನ್ನೆಲೆಯಲ್ಲಿ ಸೋಮವಾರ ತಾಲೂಕಿನಲ್ಲಿ ಹಬ್ಬದ ವಾತಾವರಣ ಸೃಷ್ಠಿಯಾಗಿತ್ತು.

ಪಟ್ಟಣದ ಪ್ರಮುಖ ರಸ್ತೆಗಳ ಬೀದಿ ದೀಪಗಳು ಕೇಸರಿ ಬಟ್ಟೆಯಿಂದ ಅಲಂಕೃತಗೊಂಡಿದ್ದವು. ಎಲ್ಲ ದೇವಸ್ಥಾನಗಳಲ್ಲಿ ಶ್ರೀರಾಮರಿಗೆ ವಿಶೇಷ ಪೂಜೆ, ಭಜನೆ ಸೇರಿದಂತೆ ಹಲವು ಕಾರ್ಯಕ್ರಮಗಳು ಜರುಗಿದವು. ವ್ಯಾಪಾರಸ್ಥರು ತಮ್ಮ ಅಂಗಡಿ ಮುಂಗಟ್ಟುಗಳ ಮುಂದೆ ಶ್ರೀ ರಾಮರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸಿಹಿ, ಪಾನಕ ಹಂಚಿ ಭಕ್ತಿ ಸಮರ್ಪಿಸಿದರು. ಕೆಲವರು ತಮ್ಮ ಮಕ್ಕಳಿಗೆ ಶ್ರೀ ರಾಮರ ಹಾಗೂ ಸೀತಾ ಮಾತೆಯ ಉಡ-ುಗೆ ತೊಡಿಸುವ ಮೂಲಕ ಶ್ರೀ ರಾಮಚಂದ್ರನ ದರ್ಶನ ಪಡೆದರು. ಯುವಕರು ಶುಭ್ರವಾದ ಬಿಳಿ ಬಟ್ಟೆ ತೊಟ್ಟು ಕೊರಳಿಗೆ ಕೇಸರಿ ಶಾಲು ಹಾಕಿ ತಮ್ಮ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳಿಗೆ ಶ್ರೀರಾಮನಿರುವ ಕೇಸರಿ ಬಾವುಟವನ್ನು ಅಂಟಿಸಿ ಜೈ ಶ್ರೀರಾಮ ಜೈರಾಮ ಅಂತಾ ಜಯಘೋಷ ಹಾಕುತ್ತ ಊರೆಲ್ಲ ಸುತ್ತಿದರು. ಒಟ್ಟಾರೆ ಸೋಮುವಾರದಂದು ಪಟ್ಟಣ ಸೇ-ರಿದಂತೆ ಹಲವು ಹಳ್ಳಿಗಳಲ್ಲಿ ಹಬ್ಬದಂತೆ ಸಂಭ್ರಮವನ್ನು ಆಚರಿಸಿದರು.



ಶ್ರೀ ರಾಘವೇಂದ್ರ ರಾಯರ ಮಠವನ್ನು ವಿಶೇಷ ದೀಪಗಳ ಮೂಲಕ ಅಲಂಕೃತಗೊಳಿಸಲಾಗಿತ್ತು. ವೆಂಕಟೇಶ ಅಚಾರ್ಯರು ಹಾಗೂ ಪಂಡಿತ ನರಹರಿ ಆಚಾರ್ಯ ಜೋಶಿ ಇವರಿಂದ ಜ.13 ರಿಂದ ಸಂಪೂರ್ಣ ರಾಮಾಯಣ ಪ್ರವಚನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿ-ತ್ತು. ಜ.22 ರಂದು ಬೆಳಿಗ್ಗೆಯಿಂದಲೇ ವಿಷ್ಣು ಸಹಸ್ರನಾಮ ಪಾರಾಯಣ, ಸುದರ್ಶನ ಹೋಮ, ಸುವರ್ಣ ಮಂತ್ರಾಕ್ಷತೆಯ ಪೂಜೆ, ಪುಷ್ಪಾರ್ಚನೆ, ತೀರ್ಥ ಪ್ರಸಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಅಯೋಧ್ಯೆಯ ಶ್ರೀ ರಾಮ ಮಂದಿರದ ವಿಶೇಷತೆಯನ್ನು ಹಿಂದೂ ಪ್ರಮುಖ ಬಸವರಾಜ ನಂದಿಕೇಶ್ವರಮಠ ಅವರು ತಿಳಿಸಿಕೊಟ್ಟರು. ಸಂಜೆ ದೀಪೋತ್ಸವ ಕಾರ್ಯಕ್ರಮ ಜರುಗಿತು.

ಗಣೇಶ, ಬಜಾರ ನ ದ್ಯಾಮವ್ವ ದೇವಿ, ಕುಂಬಾರ ಗಲ್ಲಿಯ ಗ್ರಾಮ ದೇವತೆ, ಶಾರದಾ ದೇವಿ, ಲಕ್ಷ್ಮೀ ವೆಂಕಟೇಶ್ವರ, ಬಜಾರ, ಮಾರುತಿ ನಗರ, ವಿದ್ಯಾ ನಗರ, ಕಿಲ್ಲಾ ಗಲ್ಲಿಯ, ಎಪಿಎಂಸಿಯಲ್ಲಿರುವ, ಹುಡ್ಕೋ ಬಡಾವಣೆಗಳ ಹನುಮಾನ ದೇವಸ್ಥಾನಗಳಲ್ಲಿ ಶ್ರೀ ರಾಮರಿಗೆ ಮತ್ತು ಪವಿತ್ರ ಮಂತ್ರಾಕ್ಷತೆಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಬಜಾರ ನ ಹನುಮಾನ ದೇವಸ್ಥಾನದಲ್ಲಿ ಆರ್ಯವೈಶ್ಯ ಸಮಾಜ ಬಾಂಧವ-ರಿಂದ ಶ್ರೀರಾಮರಿಗೆ ವಿಶೇಷ ಪೂಜೆ ನೆರವೇರಿಸಿ ಭಜನೆ ನಡೆಸಿದರು. ಹುಡ್ಕೋ ಬಡಾವಣೆಯ ಗಾರ್ಡನ್ ಜಾಗೆಯಲ್ಲಿ, ವಾಲ್ಮೀಕಿ ವೃತ್ತದಲ್ಲಿ, ದ್ಯಾಮವ್ವ ದೇವಿ ದೇವಸ್ಥಾನದಲ್ಲಿ ಪ್ರಮುಖರು ಸ್ವಯಂ ಪ್ರೇರಿತರಾಗಿ ಪ್ರಸಾದದ ವ್ಯವಸ್ಥೆ ಕಲ್ಪಿಸಿದ್ದರು. ಕಾಳಿಕಾ ದ್ವಿಚಕ್ರ ವಾಹನ ಸರ್ವಿಸ್ ಸೆಂಟರ್ ನ ಮುಖ್ಯಸ್ಥ ಸಂತೋಷ ಅವರು 100 ಲೀಟರ್ ಪಾನಕದ ಸೇವೆ ಕಲ್ಪಿಸಿದ್ದರು. ಫಕೀರೇಶ್ವರ ಡೈಗ್ನೋಸ್ಟಿಕ್ ನ ಮಾಲೀಕರು ಕರ ಸೇವಕರನ್ನು ದಂಪತಿಗಳ ಸಮೇತ ಸನ್ಮಾನಿಸಿ ಗೌರವಿಸಿದರು. ಈಶ್ವರ ಮತ್ತು ಬಸವ ಫ್ಲೆಕ್ಸ್ ಮಾಲೀಕರು ತಮ್ಮ ಅಂಗಡಿಯ ಎದುರು ಶ್ರೀರಾಮರ ಕಟೌಟ್ ನಿಲ್ಲಿಸಿ ಸಾರ್ವಜನಿಕರಿಗೆ ಸೆಲ್ಫಿಗಾಗಿ ಅವಕಾಶ ಕಲ್ಪಿಸಿದ್ದರು.

> ಅದೆಷ್ಟೋ ಜನರ ಪ್ರಾಣ ತ್ಯಾಗ ಬಲಿದಾನದ ಫಲದಿಂದ ದೇಶದ ಪ್ರತಿಯೊಬ್ಬ ಹಿಂದೂವಿನ ಮನ ಶ್ರೀರಾಮರ ಜಪ ಮಾಡುತ್ತಿದೆ. ಸೋಮವಾರ ರಾಷ್ಟ್ರೀಯ ಹಬ್ಬವಾಗಿ ಪರಿಣಮಿಸಿದೆ. ಶ್ರೀ ರಾಮರ ಆದರ್ಶಗಳು ಇಡೀ ವಿಶ್ವದಲ್ಲಿ ಬೆಳಗುತ್ತಿರಬೇಕು. ಈ ಸಂದರ್ಭ ಕರ ಸೇವಕರನ್ನು ನೆನೆಯುತ್ತೇನೆ.
>
> **-ಆರ್.ಎಸ್.ಪಾಟೀಲ ಕೂಚಬಾಳ. ಭಾಜಪಾ ಜಿಲ್ಲಾಧ್ಯಕ್ಷರು, ವಿಜಯಪುರ.**

# ಪಡಗಾನೂರ: ಶ್ರೀರಾಮೋತ್ಸವ ಮೆರವಣಿಗೆ



ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಅಯೋಧ್ಯೆಯಲ್ಲಿ ಶ್ರೀರಾಮ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಪಡಗಾನೂರ ಗ್ರಾಮದಲ್ಲಿ ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ, ಮೆರವಣಿಗೆ ಮಾಡಲಾಯಿತು.

ತಾಲ್ಲೂಕಿನ ಪಡಗಾನೂರ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ ಸೋಮೇಶ್ವರ ದೇವಸ್ಥಾನದಲ್ಲಿ ಪೂಜೆ ನೆರವೇರಿಸಲಾಯಿತು. ನಂತರ ಶ್ರೀರಾಮನ ಭಾವಚಿತ್ರಕ್ಕೆ ಭಕ್ತಿಪೂರ್ವಕವಾಗಿ ಪೂಜೆ ಸಲ್ಲಿಸಿ ನಂತರ ಟ್ರಾ□□ಕ್ಟರ್ ಮೂಲಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಜರುಗಿಸಲಾಯಿತು.

ಗ್ರಾಮ ಪಂಚಾಯಿತಿ ಸದಸ್ಯ ಭೀರು ಹಳ್ಳಿ, ಆಕಾಶ ಕಬ್ಬಿನ, ಸಿದ್ದು ಪಾಟೀಲ, ಪ್ರವೀಣ ಕಬ್ಬಿನ, ಸಿದ್ದು ಹದರಿ, ಸಂತೋಷ ಧೋತ್ರೆ, ವಿನಾಯಕ ಹಿರೇಮಠ, ಪ್ರದೀಪ್ ಬಾಗೇವಾಡಿ, ಸೋಮು ಹುಗ್ಗಿ, ಸಂಗಮೇಶ ವಡಗೇರಿ ಭಾಗವಹಿಸಿದ್ದರು.

# ಶೋಷಿತರ ಜಾಗೃತಿ ಸಮಾವೇಶದ ಪೂರ್ವಭಾವಿ ಸಭೆ



**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಶೋಷಿತರ ಜಾಗೃತಿ ಸಮಾವೇಶದ ಅಂಗವಾಗಿ ವಿವಿಧ ಸಮುದಾಯಗಳ ಪ್ರಮುಖರ ಪೂರ್ವಭಾವಿ ಸಭೆ ಜರುಗಿತು.

ಪಟ್ಟಣದ ಪ್ರವಾಸಿಮಂದಿರದಲ್ಲಿ ಮಂಗಳವಾರ ಜರುಗಿದ ಪೂರ್ವಭಾವಿ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಧುರೀಣ ಎಸ್.ಎಮ್.ಪಾಟೀಲ(ಗಣಿಯಾರ) ಮಾತನಾಡಿ, ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟಗಳ ಅಡಿಯಲ್ಲಿ ಚಿತ್ರದುರ್ಗದಲ್ಲಿ ಇದೇ ದಿ:28 ಭಾನುವಾರದಂದು ಏರ್ಪಡಿಸಲಾಗಿರುವ ಸಮಾವೇಶದ ಕುರಿತು ಮಾಹಿತಿ ನೀಡಿ, ತಾಲ್ಲೂಕಿನ ಶೋಷಿತ ಸಮುದಾಯಗಳ ಪ್ರಮುಖರು ಅದರಲ್ಲೂ ದಲಿತ, ಹಿಂದುಳಿದ, ಅಲೆಮಾರಿ, ಅರೆಅಲೆಮಾರಿ, ಆದಿವಾಸಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಜನಸಾಮಾನ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದರು.

ಕಾಂಗ್ರೆಸ್ ಪಕ್ಷದ ಪ್ರಮುಖರಾದ ಗೌರಮ್ಮ ಮುತ್ತತ್ತಿ, ಸೋಮನಾಥ ಕಳ್ಳಿಮನಿ, ರಾಜಶ್ರೀ ಯರನಾಳ, ನಾಗರಾಜು ಲಂಬು, ಪ್ರಕಾಶ ಗುಡಿಮನಿ ಮಾತನಾಡಿದರು.

ಸಭೆಯಲ್ಲಿ ಮಾನವ ಬಂಧುತ್ವ ವೇದಿಕೆಯ ಪ್ರಭುಗೌಡ ಪಾಟೀಲ, ಜಕ್ಕಪ್ಪ ಅಡವಿ, ರಾಜೇಶ ತೊರವಿ, ದೇವಾನಂದ ಲಚ್ಯಾಣ, ರಾಜ-ಕುಮಾರ ಸಿಂದಗೇರಿ, ಮಹೇಶ ಮುರಾಳ, ಬಸವರಾಜ ಇಂಗಳಗಿ, ಶಿವು ವಾಲೀಕಾರ, ಹೂಯೋಗಿ ತಳ್ಳೊಳ್ಳಿ, ಭೀರು ಹಳ್ಳಿ, ರಾಜು ರಾಠೋಡ, ಶರಣು ನಾಟೀಕಾರ, ಅಪ್ಪು ಮುಲ್ಲಾ, ರಾಘವೇಂದ್ರ ಪಡಗಾನೂರ, ರಾಘವೇಂದ್ರ ಗುಡಿಮನಿ, ಇಕ್ಬಾಲ್ ಬಿಜಾಪೂರ, ರಾವುತ ಮಾಸ್ತರ ತಳಕೇರಿ ಸೇರಿದಂತೆ ಇತರರು ಭಾಗವಹಿಸಿದ್ದರು.

### ಆದಿಶೇಷ ಸಂಸ್ಥಾನ ಹಿರೇಮಠದ ಜಾತ್ರಾ ಮಹೋತ್ಸವ-ಧರ್ಮಸಭೆ ಕಾರ್ಯಕ್ರಮ

# ಆದಿಶೇಷ ಮಠಕ್ಕೆ ರೂ.25ಲಕ್ಷ ಅನುದಾನ :ಶಾಸಕ ಮನಗೂಳಿ

**ಉದಯರಶ್ಮಿ ನ್ಯೂಸ್**



ಸಿಂದಗಿ: ಧರ್ಮಕ್ಷೇತ್ರಗಳು ಬೆಳೆದುಕೊಂಡು ಬಂದರೆ ಆರೋಗ್ಯ ಪೂರ್ಣ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ ಎಂದು ಬಾಳೆಹೊನ್ನೂರು ರಂಬಾಪೂರಿ ಪೀಠದ ಶ್ರೀಮದ್ರಂಬಾಪುರಿ ವೀರಸಿಂಹಾಸನಾಧೀಶ್ವರ ಜಗದ್ಗುರು ಪ್ರಸನ್ನರೇಣುಕಾ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರರು ಹೇಳಿದರು.

ಮಂಗಳವಾರದಂದು ಪಟ್ಟಣದ ಬಸ್‌ಡಿಪೋ ಬಳಿಯಿರುವ ಶ್ರೀ ಆದಿಶೇಷ ಸಂಸ್ಥಾನ ಹಿರೇಮಠದಲ್ಲಿ 28ನೆಯ ಜಾತ್ರಾ ಮಹೋತ್ಸವ-ಧರ್ಮಸಭೆ ಕಾರ್ಯಕ್ರಮ ಹಾಗೂ ಯಡಿಯೂರು ಶ್ರೀ ಸಿದ್ಧಲಿಂಗೇಶ್ವರ ಪುರಾಣ ಪ್ರವಚನ ಮಹಾ ಮಂಗಲೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಧರ್ಮ ಎಂದರೆ ಹೇಳುವಂತಹದಲ್ಲ, ನಡೆದು ತೋರಿಸುವಂತಹದ್ದು ನಿಜವಾದ ಧರ್ಮ. ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಸಂಸ್ಕೃತಿ ಭಾರತ ದೇಶದ್ದು. ಈ ದೇಶದಲ್ಲಿ ಹಲವಾರು ಧರ್ಮ ಮತ್ತು ಆಚ-'ರಣೆಗಳು ಬೆಳೆದುಕೊಂಡು ಬಂದಿವೆ. ಧರ್ಮ ಬೇರೆ ಬೇರೆಯಾದರೂ ಆಚರಣೆ ಬೇರೆಯಾದರೂ ಎಲ್ಲ ಧರ್ಮಗಳ ಕೊನೆಯ ಗುರಿ ಮಾನವನ ಕಲ್ಯಾಣವನ್ನು ಬಯಸುತ್ತದೆ. ತಾಲೂಕಿನ ಜನತೆಯಲ್ಲಿ ಮಾನವ ಧರ್ಮ ಹಿರಿದಾಗಿದ್ದು, ಎಲ್ಲವನ್ನೂ ಗಮನಿಸಿ ಸಿಂದಗಿ ನಗರವು ಉತ್ತಮ ಧಾರ್ಮಿಕ ವಾತವರಣವನ್ನುಂಟು ಮಾಡುವ ಅಪೇಕ್ಷೆ ನಮ್ಮದು ಎಂದು ಆಶೀರ್ವದಿಸಿದರು.

ಈ ವೇಳೆ ಶಾಸಕ ಅಶೋಕ ಮನಗೂಳಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂತಹ ಪುರಾಣ ಪ್ರವಚನ ಆಲಿಸಬೇಕು. ಈ ಮಾನವ ಜನ್ಮ ಬಲು ದೊಡ್ಡದು ಮತ್ತು ಅಪೂರ್ವವಾಗಿದೆ. ಶರಣರ, ಸಂತರ, ಮಹಾಂತರ ಜೀವನ ಚ-ರಿತ್ರೆಗಳನ್ನು ಅರಿತುಕೊಂಡು ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಕೊಳ್ಳಬೇಕು ಎಂದರಲ್ಲದೆ, ಆದಿಶೇಷ ಸಂಸ್ಥಾನ ಮಠಕ್ಕೆ ಶಾಸಕರ ಅನುದಾನ ಅಡಿಯಲ್ಲಿ 25ಲಕ್ಷ ರೂ. ಅನುದಾನ ನೀಡುವುದಾಗಿ ವಾಗ್ದಾನ ಮಾಡಿದರು.

ಕಾರ್ಯಕ್ರಮದ ಸಮ್ಮುಖವನ್ನು ನಾಲವಾರ ಶ್ರೀಮಠದ ಶಿವಯೋಗಿ ಡಾ.ಚಂದ್ರಶೇಖರ ಸ್ವಾಮಿಗಳು ವಹಿಸಿದ್ದರು. ಈ ವೇಳೆ ಸಾರಂಗಮಠದ ಡಾ.ಪ್ರಭು ಸಾರಂಗದೇವ ಶಿವಾಚಾರ್ಯರು, ಮಳಲಿ ಸಂಸ್ಥಾನ ಮಠದ ಡಾ.ಗುರು ನಾಗಭೂಷಣ ಶಿವಾಚಾರ್ಯರು, ಚಳಗೇರಾ ಮಠದ ವೀರಸಂಗಮೇಶ್ವರ ಶಿವಾಚಾರ್ಯರು, ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದ ಸಿಂದಗಿ ಆದಿಶೇಷ ಶ್ರೀಮಠದ ನಾಗರತ್ನ ರಾಜಯೋಗಿ ವೀರರಾಜೇಂದ್ರ ಸ್ವಾಮಿಗಳು ಮಾತನಾಡಿದರು.

ಇದೇ ಸಂದರ್ಭದಲ್ಲಿ ಕಲಾದಗಿ ಪಂಚಗೃಹ ಹಿರೇಮಠದ ಶ್ರೀಗಳು, ಕೆಂಭಾವಿ ಶ್ರೀಗಳು, ಖೈನೂರ ಶ್ರೀಗಳು, ಅಕ್ಕಲಕೋಟ ನಾವದಗಿ-ಮಂಗಳೂರ ಶ್ರೀಗಳು, ಮಲಘಾಣ ಶ್ರೀಗಳು ಉಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ಭವ್ಯ ಮೆರವಣಿಗೆಯು ಪ್ರಮುಖ ರಸ್ತೆಗಳ ಮೂಲಕ ಶ್ರೀ ಆದಿಶೇಷ ಹಿರೇಮಠದವರೆಗೆ ಬೃಹತ್ ಕಾರ್ ರ‍್ಯಾಲಿ ಮೂಲಕ ಶ್ರೀಮಠಕ್ಕೆ ತಲುಪಿತು.

ಈ ವೇಳೆ ಬಾಗಲಕೋಟೆಯ ಚರ್ಮರೋಗ ತಜ್ಞೆ ಡಾ.ಮಹಾಜಬೀನ ಮದರಕರ ಹಾಗೂ ನಾಯಕ ನಟ ವಿಶ್ವಪ್ರಕಾಶ ಮಲಗೊಂಡ ಅವರಿಗೆ ಗೌರವಿಸಿ ಸನ್ಮಾನಿಸಲಾಯಿತು.

ನಾಲವಾರ ಜಹಾಗೀರವಾರ ಆದಿಶೇಷ ಸಂಸ್ಥಾನ ಹಿರೇಮಠದ ಸದ್ಗುರು ಶಿವಯೋಗಿ ಡಾ.ಚಂದ್ರಶೇಖರ ಸ್ವಾಮಿಗಳು, ಕಲಾದಗಿ ಪಂಚಗೃಹ ಹಿರೇಮಠದ ಶ್ರೀ ಗಂಗಾಧರ ಶಿವಾಚಾರ್ಯರು, ಕೆಂಭಾವಿ ಹಿರೇಮಠ ಶ್ರೀ ಚನ್ನಬಸವ ಶಿವಾಚಾರ್ಯರು, ಮಲಘಾಣ ಜಡೆಶಾಂತಲಿಂಗ ಶಿವಾಚಾರ್ಯರು, ಕೇರೂಟಗಿಯ ಶಿವಬಸವ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು.

ಸಿದ್ದು ಪಾಟೀಲ ಹೂವಿನಹಳ್ಳಿ, ಸಚಿನಗೌಡ ಪಾಟೀಲ, ಭೂದಾನಿ ಗೊಲ್ಲಾಳಪ್ಪ ಮಲ್ಲೇಶಪ್ಪ ಬಗಲಿ, ವಿಜಯಪುರದ ಬಸವರಾಜ ಮಸಳಿ, ಮಡಿವಾಳಯ್ಯ ಹಿರೇಮಠ, ಪಂಚಮಸಾಲಿ ಸಮಾಜದ ತಾಲೂಕಾಧ್ಯಕ್ಷ ಎಂ. ಎಂ. ಹಂಗರಗಿ, ಪ್ರ.ದ.ಗುತ್ತಿಗೆದಾರ ರವಿ ದೇಸಾಯಿ, ಶ್ರೀಮತಿ ಶಿಲ್ಪಾ ಕುದರಗೊಂಡ, ರಾಜ್ಯ ಪರಿಷತ್ ಸದಸ್ಯ ಸಂಗನಗೌಡ ಎಸ್. ಪಾಟೀಲ, ಇಲಕಲ್ ಉದ್ಯಮಿ ನಾಗರಾಜ ತಂಗಡಗಿ, ಕಾವ್ಯ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಚಂದ್ರಶೇಖರ ನಾಗರಬೆಟ್ಟ, ಅಶೋಕ ವಾರದ, ನಿವೃತ್ತ ಪ್ರಾಧ್ಯಾಪಕ ಶಾಂತೂ ಹಿರೇಮಠ, ಹೋರ್ತಿಯ ರೇವಣಸಿದ್ದ ಪೂಜಾರಿ, ರಾಜೇಶ ಹಿರೇಮಠ, ನಾಗರತ್ನಾ ಮನಗೂಳಿ, ಕಸಾಪ ಅಧ್ಯಕ್ಷ ಶಿವಾನಂದ ಬಡಾನೂರ, ಮಲ್ಲನಗೌಡ ಪಾಟೀಲ ಇಬ್ರಾಹೀಂಪೂರ ಇದ್ದರು.

ಜೇರಟಗಿ ವೇ.ಮೂ ಸಿದ್ದಯ್ಯಶಾಸ್ತ್ರಿ ಹಾಗೂ ಸುರೇಶ ಹೊನ್ನಕಿರಣಗಿ ಪ್ರಾರ್ಥನೆಗೈದರು. ಮಹಾಂತೇಶ ನೂಲಾನವರ ಸ್ವಾಗತಿಸಿದರು. ಪೂಜಾ ಹಿರೇಮಠ ನಿರೂಪಿದರು. ಪಂಡಿತ ಯಂಪೂರೆ ವಂದಿಸಿದರು.

# ಯಶಸ್ಸಿನ ಸಾಧನೆಗೆ ಮುಂದೆ ಗುರಿ, ಹಿಂದೆ ಗುರು ಇರಬೇಕು

**ಉದಯರಶ್ಮಿ ನ್ಯೂಸ್**



ದೇವರಹಿಪ್ಪರಗಿ: ಜೀವನದಲ್ಲಿ ಯಶಸ್ಸಿನ ಸಾಧನೆಗೆ ಮುಂದೆ ಗುರಿ, ಹಿಂದೆ ಗುರು ಇರಬೇಕು ಎಂದು ಕುಮಸಗಿ ಶ್ರೀಕಲ್ಲಾಲಿಂಗೇಶ್ವರ ಮಠದ ಶಿವಾನಂದ ಶ್ರೀಗಳು ಹೇಳಿದರು.

ತಾಲ್ಲೂಕಿನ ಗಂಗನಳ್ಳಿ ಗ್ರಾಮದಲ್ಲಿ ಮಂಗಳವಾರ ಜರುಗಿದ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಜಯಂತ್ಯುತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

12ನೇ ಶತಮಾನದ ವಚನ ಚಳುವಳಿಯು ಧಾರ್ಮಿಕ ಚಳುವಳಿಯಂತೆ ಕಂಡು ಬಂದರು ಅದೊಂದು ಜಾತಿ ಕುಲಗಳ ಎಲ್ಲೆ ಮೀರಿದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮಹಾ ಕ್ರಾಂತಿಯಾಗಿ ಇತಿಹಾಸದಲ್ಲಿ ಗುರುತಿಸಲ್ಪಟ್ಟಿದೆ. ಹಾಗೆಯೇ ಈ ಚಾರಿತ್ರಿಕ ಮಹಾ ಆಂದೋಲನದ ರೂವಾರಿ ಅಣ್ಣ ಬಸವಣ್ಣನೊಂದಿಗೆ ನೂರಾರು ಶರಣ-ರು ಹೆಗಲಿಗೆ ಹೆಗಲಾಗಿ ದುಡಿದರು ಅಂತಹ ಶರಣರ ಪೈಕಿ ಅಂಬಿಗರ ಚೌಡಯ್ಯನವರು ಪ್ರಮುಖರು ಎಂದರು.

ಕಾರ್ಯಕ್ರಮದಲ್ಲಿ ಸುರೇಶಗೌಡ ಪಾಟೀಲ(ಸಾಸನೂರ), ಮಲ್ಲಪ್ಪ ದುದ್ದಗಿ, ದಯಾನಂದ ದೊಡಮನಿ, ಮಲ್ಲಪ್ಪ ಬೇನೂರ, ರಾಮ ಸೊನ್ನಳ್ಳಿ, ಪರಶುರಾಮ ಟಕ್ಕಳಕಿ, ಸಿದ್ರಾಮಯ್ಯ ಮಠ, ಮಲ್ಲನಗೌಡ ಪಾಟೀಲ, ಸಂಘದ ಅಧ್ಯಕ್ಷ ಚಿದಾನಂದ ಕನ್ನೊಳ್ಳಿ, ಈರಣ್ಣ ಶಾಸ್ತ್ರಿ ( ಚಿಕ್ಕರೂಗಿ), ಸದಾಶಿವ ದೇಶಪಾಂಡೆ, ಬಸವರಾಜ ಈಶ್ವರಪ್ಪಗೋಳ, ರಾಜಶೇಖರ ನಾಯಕ ಈರಣ್ಣ ಶಾಸ್ತ್ರಿ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

# ಜ.26 ರಂದು ರಕ್ತದಾನ ಶಿಬಿರ

**ಉದಯರಶ್ಮಿ ನ್ಯೂಸ್**


ಮುದ್ದೇಬಿಹಾಳ: ಗಣ-ರಾಜ್ಯೋತ್ಸವದ ಪ್ರಯುಕ್ತ ಜ.26 ರಂದು ಬೆಳಿಗ್ಗೆ 10ಗಂಟೆಯಿಂದ ಪಟ್ಟಣದ ತಾಳಿಕೋಟೆ ರಸ್ತೆಯಲ್ಲಿರುವ ಬಸವ ಅಂತರಾಷ್ಟ್ರೀಯ ಶಾಲೆಯಲ್ಲಿ ತಾಲೂಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಶಾಖೆ ವಿಜಯಪುರ, ಬಸವ ಇಂಟ-ರ್ನ್ಯಾಷನಲ್ ಸ್ಕೂಲ್ ಹಾಗೂ ಇನ್ನರ್ ವೀಲ್ ಕ್ಲಬ್ ಮುದ್ದೇಬಿಹಾಳ ಇವರ ಸಹಯೋಗದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ರಕ್ತದಾನ ಮಾಡುವ ಫಲಾನುಭವಿಗಳು ಶಿಬಿರದಲ್ಲಿ ಹೆಸರು ನೊಂದಾಯಿಸಲು ಈ ಮೊಬೈಲ್ ನಂಬರ್ ಗಳನ್ನು ಸಂಪರ್ಕಿಸಬಹುದು. 7259138210, 9481630955, 911464434, 8147128997, 9620783788

# ಪ್ರಧಾನಿ ಮೋದಿ ಉಪವಾಸ ಲೇವಡಿ ಖಂಡನೀಯ :ಡಾ.ಚೌಧರಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕಾಂಗ್ರೆಸ್ ಹಿರಿಯ ನಾಯಕ ವೀರಪ್ಪ ಮೊಯ್ಲಿ ಅವರು ಪ್ರಧಾನಿ ಮೋದಿ ಅವರ ಉಪವಾಸವನ್ನು ಲೇವಡಿ ಮಾಡಿರುವುದು ಹಾಗೂ ಸಚಿವ ಪ್ರಿಯಾಂಕ ಖರ್ಗೆ ಅವರ ರಾಮ ಮಂದಿರ ಕುರಿತ ಹೇಳಿಕೆಯನ್ನು ಬಿಜೆಪಿ ಮುಖಂಡ ಡಾ.ಗೌತಮ್ ಆರ್.ಚೌಧರಿ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಮಂಗಳವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಮಲಲ್ಲಾ ಪ್ರಾಣಪ್ರತಿಷ್ಠೆಯು ಅಯೋಧ್ಯೆಯಲ್ಲಿ ಸರಾಗವಾಗಿ ಸಂಪನ್ನವಾಗುವ ಮೂಲಕ ಕೋಟಿ ಕೋಟಿ ಹಿಂದೂಗಳ ಕನಸು ನೆರವೇ-ರಿದೆ. ಇದನ್ನು ಸಂಭ್ರಮಿಸುವುದು ಬಿಟ್ಟು, ಕಾಂಗ್ರೆಸ್ ಹಿರಿಯ ನಾಯಕ ವೀರಪ್ಪ ಮೊಯ್ಲಿ ಅವರು ಮೋದಿ ಅವರ 11ದಿನದ ಉಪವಾಸ ವ್ರತವನ್ನು ಲೇವಡಿ ಮಾಡಿರುವುದು ಖಂಡನೀಯ. ಪ್ರಧಾನಿ ಮೋದಿಯವರು ಉಪವಾಸ ಮಾಡಿರುವುದು ಡೌಟ್ ಅಂತ ಹೇಳಿದ್ದಿರಲ್ಲಾ, ನಿಮ್ಮ ಪಕ್ಷದವರು ಯಾಕೆ ಅಯೋಧ್ಯೆ ರಾಮಮಂದಿರಕ್ಕೆ ಹೋಗಿ ಮೋದಿ ಏನು ಮಾಡುತ್ತಿದ್ದಾರೆ ಪರಿಶೀಲಿಸಲಿಲ್ಲ. ರಾಮಮಂದಿರದಲ್ಲಿ ರಾಜಕೀಯ ತರುವುದು ನಿಮಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಶೋಭೆ ತರುವುದಿಲ್ಲ. ಸಾಧಿಸುವ ಛಲ ಹಾಗೂ ಧೃಡ ಸಂಕಲ್ಪ ಇದ್ದರೆ, 11 ದಿನ ಉಪವಾಸ ಮಾಡುವುದು



ಅಸಾಧ್ಯವೇನಲ್ಲ ಎಂಬುದು ವೈದ್ಯಕೀಯ ಲೋಕದಲ್ಲಿ ಸಾಬೀತಾಗಿದೆ. ಮೊಯ್ಲಿ ಅವರಿಗೆ ಇದರ ಅರಿವಿದ್ದಂತಿಲ್ಲ ಎಂದು ಕುಟುಕಿದರು.

ರಾಮಮಂದಿರ ಉದ್ಘಾಟನೆ ಮುನ್ನ ಹಾಗೂ ನಂತರ ಕಾಂಗ್ರೆಸ್ ರಾಜಕೀಯ ಕಾವು ಜೋರಾದಂತಿ-ದೆ. ರಾಮಮಂದಿರಕ್ಕೆ ಹೋಗಲ್ಲ, ರಾಮನ ಬಗ್ಗೆ ಭಕ್ತಿ ನನಗೆ ಇಲ್ಲ ಅಂತ ಸಚಿವ ಪ್ರಿಯಾಂಕ್ ಕರ್ಗೆ ಹೇಳಿರುವುದು ಸರಿಯಿಲ್ಲ. ರಾಮ ಮಂದಿರದ ವಾಸ್ತುಶಿಲ್ಪ, ಕಲೆ ನೋಡಲು ಹೋಗುತ್ತೇನೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಸಚಿವ ಸ್ಥಾನದಲ್ಲಿರುವ ನೀವು ಸಮಾಜ-ಕ್ಕೆ ಯಾವ ಸಂದೇಶ ಕೊಡಲು ಮುಂದಾಗಿದ್ದೀರಾ? ಹಿಂದೂಗಳ 500 ವರ್ಷಗಳ ಕನಸು ರಾಮಮಂದಿರ. ನಾನು ಸಂವಿಧಾನದ ಭಕ್ತ, ರಾಮನ ಮೇಲೆ ನನಗೆ ಭಕ್ತಿ ಇಲ್ಲ, ಅದಕ್ಕೆ ಹೋಗಲ್ಲ ಅಂತ ಹೇಳಿರುವುದು ಖಂಡನೀಯ. ಶ್ರೀರಾಮನ ಮೇಲೆ ಭಕ್ತಿ ಇಲ್ಲದಿದ್ದರೂ ಪರವಾಗಿಲ್ಲ. ಆದರೆ ಶ್ರೀರಾಮನ ಬಗ್ಗೆ ತಪ್ಪಾಗಿ ಮಾತನಾಡುವುದನ್ನು ನಿಲ್ಲಿಸಬೇಕು ಎಂದು ಡಾ.ಗೌತಮ್.ಆರ್.ಚೌಧರಿ ಒತ್ತಾಯಿಸಿದ್ದಾರೆ.

# ಸಂಘ-ಸಂಸ್ಥೆಗಳ ನಡೆ ಸಮಾಜಮುಖಿಯಾಗಿರಲಿ :ಡಾ.ಚನ್ನವೀರ ಶ್ರೀ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಫೌಂಡೇಶನ್‌ಗಳು ಮತ್ತು ಸಂಘ-ಸಂಸ್ಥೆಗಳು ಸದಾ ಸಮಾಜಮುಖಿ ಕಾರ್ಯಗಳತ್ತ ಮುನ್ನುಗ್ಗುತ್ತಿರಬೇಕು ಎಂದು ಕುಂಟೋಜಿ ಸಂಸ್ಥಾನ ಹಿರೇಮಠದ ಡಾ.ಚನ್ನವೀರ ದೇವರು ಹೇಳಿದರು.

ಪಟ್ಟಣದ ಹಳೆಯ ತರಕಾರಿ ಮಾರುಕಟ್ಟೆಯಲ್ಲಿರುವ ಶ್ರೀ ಖಾಸ್ಗತೇಶ್ವರ ಮಠದಲ್ಲಿ ತ್ರಿವಿಧ ದಾಸೋಹಿ ಲಿಂ.ಡಾ.ಶಿವಕುಮಾರ ಮಹಾಸ್ವಾಮಿಗಳ ಪುಣ್ಯ ಸ್ಮರಣೆ, ದಿ.ಶರಣು ಬೂದಿಹಾಳ ಫೌಂಡೇಶನ್ ಇವರ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ದೇಶದಲ್ಲಿ ಕೆಲವು ಫೌಂಡೇಶನ್‌ಗಳು ಸಮಾಜ ಸುಧಾ-ರಿಸಲು ಸಾಕಷ್ಟು ಶ್ರಮಿಸುತ್ತಿವೆ. ಸಧ್ಯದ ಪರಿಸ್ಥಿತಿಯಲ್ಲಿ ದೇಶದಲ್ಲಿ ಬದಲಾವಣೆ ತರಲು ಅವುಗಳು ಪಾತ್ರ ಬಹಳ ಪ್ರಮುಖವಾಗಿದೆ ಎಂದರು.

ಜಿಲ್ಲಾ ಪಂಚಾಯತ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಭೂಮಿಯಲ್ಲಿ ಮಾನವರ ಪಯಣ ದೇಹದಲ್ಲಿ ಆತ್ಮವಿರುವವರೆಗೆ ಮಾತ್ರ. ಉಸಿರು ದೇಹವನ್ನು ಬಿಟ್ಟ ನಂತರವೂ ನಮ್ಮ ಹೆಸರು ಶಾಶ್ವತವಾಗಿ ಇರಬೇಕಾದರೆ ತನಗಾಗಿ ಬದುಕದೇ ಇತರರಿಗಾಗಿ ಬದುಕಬೇಕು. ಆ ರೀತಿ ಬದುಕಿದವರು ದಿ.ಶರಣು ಬೂದಿಹಾಳಮಠ ಅವರು ಎಂದರು.

ದಿ ಕರ್ನಾಟಕ ಕೋ ಅಪ್ ಬ್ಯಾಂಕ್ ಅಧ್ಯಕ್ಷ ಸತೀಶ ಓಸ್ವಾಲ್ ಮಾತನಾಡಿ, ದಿ.ಶರಣು ಬೂದಿಹಾಳಮಠ ಅವರು ವ್ಯಕ್ತಿ, ನಾಯಕ ಅನ್ನೋದಕ್ಕಿಂತ ಅವರೊಬ್ಬ ಶಕ್ತಿಯಾಗಿದ್ದರು. ಸದಾ ಸಮಾಜ ಮುಖಿ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಅವರ ಹೆಸರಿನಲ್ಲಿ ಫೌಂಡೇಶನ್ ಸ್ಥಾಪಿಸಿ ಅವರ ನೆನಪಿನಲ್ಲಿ ಸಮಾಜ ಸೇವೆಗೆ ಮುಂದಾಗಿರುವ ಅವರ ಸಹೋದರ ಮಹಾಂತೇಶ ಅವರ ಕಾರ್ಯ ಶ್ಲಾಘನೀಯ ಎಂದರು.

ವೀರಶೈವ ಲಿಂಗಾಯತ ಸಮಾಜದ ಬಂಧುಗಳ ಅಂತ್ಯ ಸಂಸ್ಕಾರ ಕಾರ್ಯಕ್ರಮದಲ್ಲಿ ಮುಂಚೂಣಿಯಲ್ಲಿ ನಿಲ್ಲುವ ಜಂಗಮ ಸಮಾಜದ ಪ್ರಮುಖರಾದ ರಾಚಯ್ಯ ಹಿರೇಮಠ, ರಾಜ್ಯ ಪ್ರಶಸ್ತಿ ಪಡೆದ ಯುವ ಕಾಂಗ್ರೆಸ್ ಅಧ್ಯಕ್ಷ ರಫೀಕ ಶಿರೋಳ, ಬಾಗವಾನ ಬ್ಯಾಂಕ್ ನ ನೂತನ ಅಧ್ಯಕ್ಷ ಪಿಂಟು ಸಾಲಿಮನಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸನ್ಮಾನಿತರ ಪರವಾಗಿ ಪಿಂಟು ಸಾಲಿಮನಿ ಮಾತನಾಡಿದರು.

ಖಾಸ್ಗತೇಶ್ವರ ಮಠದ ಸಂಗಯ್ಯ ವಿರಕ್ತಮಠ, ಮಹಾದೇವ ಶಾಸ್ತ್ರಿ, ಕವಡಿಮಟ್ಟಿಯ ಬಸವಪ್ರಭು ಹಿರೇಮಠ, ಸಂಗಯ್ಯ ಶಾಸ್ತ್ರಿ, ಲೊಟಗೇರಿಯ ಗುರುಮೂರ್ತಿ ದೇವರು ಸಾನಿಧ್ಯ ವಹಿಸಿದ್ದರು.

ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಪ್ರಭುರಾಜ ಕಲಬುರ್ಗಿ, ಅಹಿಲ್ಯಾದೇವಿ ಹೋಳ್ಕರ್ ಶಿಕ್ಷಣ ಸಂಸ್ಥೆಯ ಪ್ರ.ಕಾರ್ಯದರ್ಶಿ ಮಲ್ಲಿಕಾರ್ಜುನ ಮಲ್ಲಿಕಾರ್ಜುನ ಮದರಿ, ಸಾಧನಾ ಮಹಿಳಾ ಒಕ್ಕೂಟದ ಶಶಿಕಲಾ ಕೆಂಧೂಳಿ, ಪುರಸಭೆ ಮಾಜಿ ಸದಸ್ಯ ಕಾಮರಾಜ ಬಿರಾದಾರ, ಹಿರಿಯ ಸಾಹಿತಿ ಬಸವರಾಜ ನಾಲತವಾಡ, ಫೌಂಡೇಶನ್ ನ ಪ್ರಮುಖರಾದ ಪ್ರಭು ದೇಸಾಯಿ(ಮನಿಕಂಠ), ನಿಕೇಶ ಓಸ್ವಾಲ, ಹುಸೇನ ನಾಗೂರ, ಆಸೀಪ ನಾಯ್ಕೋಡಿ, ಶ್ರೀಕಾಂತ ಹಿರೇಮಠ ಸೇರಿದಂತೆ ಸೇರಿದಂತೆ ಮತ್ತೀತರರು ಇದ್ದರು.

ಶಿಕ್ಷಕ ಟಿ.ಡಿ.ಲಮಾಣಿ ನಿರ್ವಹಿಸಿದರು. ಹೋರಾಟಗಾರ ಬಸವರಾಜ ನಂದಿಕೇಶ್ವರಮಠ ವಂದಿಸಿದರು.

# ಡಾ.ಅಂಬೇಡ್ಕರ್ ಜೀವನಾದರ್ಶ ಮೈಗೂಡಿಸಿಕೊಳ್ಳಿ :ಬಂಡೆ

**ಉದಯರಶ್ಮಿ ನ್ಯೂಸ್**



ಇಂಡಿ: ಮಕ್ಕಳಿಗೆ ಸಂವಿಧಾನ ಬದ್ಧವಾಗಿ ದೊರೆಯಬೇಕಾದ ಸೌಲಭ್ಯಗಳನ್ನು ಕೊಡಿಸಿ, ಸಾಧನೆ ಮಾಡಲು ಅವಕಾಶ ಮಾಡಿಕೊಡುವ ಮೂಲಕ ಮಕ್ಕಳ ಹಕ್ಕುಗಳನ್ನು ಸಂರಕ್ಷಣೆ ಮಾಡಲು ನಾಗ-ರಿಕ ಸಮಾಜದ ಪ್ರತಿಯೊಬ್ಬರು ಮುಂದಾಗಬೇಕು ಎಂದು ಯುವ ಮುಖಂಡ ಪರಶುರಾಮ ಹೊಸಮನಿ ಹೇಳಿದರು.

ಅವರು ಮಂಗಳವಾರ ತಾಲೂಕಿನ ಹಿರೇರೂಗಿ ಗ್ರಾಮದ ಕೆಬಿಎಸ್, ಕೆಜಿಎಸ್, ಯುಬಿಎಸ್ ಶಾಲೆಯಲ್ಲಿ ಜಿಲ್ಲಾ ಆಡಳಿತ,ಜಿಲ್ಲಾ ಪಂಚಾಯಿತಿ ವಿಜಯಪುರ,ತಾಲೂಕು ಪಂಚಾಯತ ಕಾರ್ಯಾಲಯ ಇಂಡಿ, ಸಪ್ತಗಿರಿ ಫೌಂಡೇಶನ್ ವಿಜಯಪುರ ಹಾಗೂ ಗ್ರಾಮ ಪಂಚಾಯಿತಿ ಹಿರೇರೂಗಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಡಾ.ಬಿ ಆರ್ ಅಂಬೇಡ್ಕರ್ ಅವರ ಜೀವನ ಮತ್ತು ವಿಚಾರಧಾರೆಯ ಕಾನೂನು ಅರಿವು ಮೂಡಿಸುವ ನಾಟಕ ಪ್ರದರ್ಶನ ಕಾರ್ಯಕ್ರಮಕ್ಕೆ ತಮಟೆ ಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಶಿಕ್ಷಕ ಸಂತೋಷ ಬಂಡೆ ಮಾತನಾಡಿ, ಡಾ. ಬಿ ಆರ್ ಅಂಬೇಡ್ಕರ್ ಅವರ ಜೀವನಾದರ್ಶಗಳನ್ನು ಮಕ್ಕಳು ಬಾಲ್ಯದಿಂದಲೇ ಡಾ. ಬಿ ಆರ್ ಅಂಬೇಡ್ಕರ್ ಅವರ ಜೀವನಾದರ್ಶಗಳನ್ನು ಮಕ್ಕಳು ಮೈಗೂಡಿಸಿಕೊಳ್ಳಬೇಕು ಎಂದರು.

ಯುವ ಮುಖಂಡ ಸಂತೋಷ ಕೋಟಗೊಂಡ, ಮುಖ್ಯ ಶಿಕ್ಷಕರಾದ ಅನಿಲ ಪತಂಗಿ, ವಿ ವೈ ಪತ್ತಾರ, ಎ ಎಂ ಬೆದ್ರೇಕರ ಹಾಗೂ ಶಿಕ್ಷಕರಾದ ಎಸ್ ಆರ್ ಚಾಳೇಕರ,ಎಸ್ ಎಂ ಪಂಚಮುಖಿ, ಎಸ್ ಎಸ್ ಅರಬ, ಎಸ್ ಡಿ ಬಿರಾದಾರ, ಎಸ್ ಬಿ ಕುಲಕರ್ಣಿ, ಎಸ್ ಪಿ ಪೂಜಾರಿ, ಜೆ ಎಂ ಪತಂಗಿ, ಸಾವಿತ್ರಿ ಸಂಗಮದ,ಎನ್ ಬಿ ಚೌಧರಿ, ಜೆ ಸಿ ಗುಣಕಿ, ಎಸ್ ಎನ್ ಡಂಗಿ, ಶಾಂತೇಶ ಹಳಗುಣಕಿ, ಸುರೇಶ ದೊಡ್ಯಾಳಕರ, ಎಫ್ ಎ ಹೊರ್ತಿ,ಎಸ್ ವ್ಹಿ ಬೆನೂರ ಮತ್ತು ಪಂಚಾಯತ್ ಸಿಬ್ಬಂದಿ ಬಸವರಾಜ ತಳಕೇರಿ, ಸಪ್ತಗಿರಿ ಫೌಂಡೇಶನ್ ಅಧ್ಯಕ್ಷ ಸುನೀಲ ರೆಡ್ಡಿ ಸೇರಿದಂತೆ ಎಲ್ಲ ಶಿಕ್ಷಕರು ಹಾಗೂ ಮಕ್ಕಳು, ಪಾಲಕರು ಭಾಗವಹಿಸಿದ್ದರು.


ಇದೇ ಸಂದರ್ಭದಲ್ಲಿ ಕಲಾವಿದರು ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ ಮತ್ತು ವಿಚಾರಧಾರೆಯ ಕಾನೂನು ಅರಿವು ಮೂಡಿಸುವ ನಾಟಕ ಪ್ರದರ್ಶಿಸಿದರು.

# ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬಂದ ಬಗೆ

ಉದಯರಶ್ಮಿ ನ್ಯೂಸ್

ಮಕ್ಕಳ ಸಾಹಿತ್ಯ ಆರಂಭದಲ್ಲಿ ಕಿವಿಯ ಮೂಲಕ ಗ್ರಹಿಸುವ ಲಾಲಿ ಹಾಡುಗಳಿಂದಲೇ ಕೂಡಿದ್ದು, ಅನಂತರ ಕಥೆಗಳಿಂದ ಬೆಳೆದು ಬಂದಿರಬಹುದು.. ಹಾಡುವ ಹಾಗೂ ಕಥೆ ಹೇಳುವವರ ಹಾವಭಾವಗಳನ್ನು ನೋಡಿಯೂ ಮಗು ಗ್ರಹಿಸಬಹುದು. ಈ ಕಾರಣದಿಂದ ಮಾನವನ ಸಾಹಿತ್ಯದ ಬುನಾದಿ ಇದಾಗಿದೆ ಎಂದರೆ ತಪ್ಪಾಗಲಾರದು. ಮಕ್ಕಳ ಸಾಹಿತ್ಯದ ಮೂಲ ಆಶಯ ಜಾನಪದವಾಗಿರುವುದು. ಜಗತ್ತಿನಲ್ಲಿ ಇದು ಹೇಗೇ ಪ್ರಾರಂಭವಾಗಿರಲಿ ಮಕ್ಕಳಿಗೆ ಅಗತ್ಯವಾದದ್ದು, ಉಪಯುಕ್ತವಾದದ್ದು ಎನ್ನುವುದಕ್ಕೆ ಎರಡನೇ ಮಾತಿಲ್ಲ. ಹಿರಿಯರೂ ಇದನ್ನು ಸವಿಯಬಹುದು ಎನ್ನುವುದು ಇದರ ಒಂದು ವಿಶೇಷ ಲಕ್ಷಣ.

ಮಕ್ಕಳ ಸಾಹಿತ್ಯ ಮಕ್ಕಳಿಗೆ ನಲಿವು, ತಿಳಿವು ಎರಡನ್ನು ಕೊಡಬೇಕು. ಸಂಸ್ಕೃತಿ, ಶಿಕ್ಷಣ, ಕುಟುಂಬ ಮತ್ತು ಪರಿಸರ ಈ ನಾಲ್ಕರ ಪ್ರಭಾವ ಮಕ್ಕಳ ಸಾಹಿತ್ಯದಲ್ಲಿ ಬರಬೇಕು. ಮಕ್ಕಳ ಮಾನಸಿಕ, ಬೌದ್ಧಿಕ, ಸಾಮಾಜಿ–ಕ ಹಾಗೂ ಭಾಷಿಕ ಬೆಳವಣಿಗೆಗೆ ಸಹಾಯಕವಾಗಬೇಕು ಮೊದಲಾದ ಅನೇಕ ಅಭಿಪ್ರಾಯಗಳು ಮಕ್ಕಳ ಸಾಹಿತ್ಯ ಕುರಿತು ವ್ಯಕ್ತವಾಗಿದೆ. ಒಟ್ಟಾರೆ ಮಕ್ಕಳ ಸಾಹಿತ್ಯ ಎಂಬುದು ಮಕ್ಕಳಿಗೆ ಸಂತೋಷ ನೀಡಬೇಕು, ಭಾಷೆಯನ್ನು ಕಲಿಸಬೇಕು, ಆಲೋಚನಾ ಶಕ್ತಿಯನ್ನು




ಬೆಳೆಸಬೇಕು, ಜೊತೆಗೆ ಬದುಕುವ ವಿವೇಕವನ್ನು ಕಲಿಸುವಂತಿರಬೇಕು ಮತ್ತು ಆಲೋಚನೆ ಮಾಡುವಂತಿ–ರಬೇಕು. ಆಗ ಮಕ್ಕಳ ಸಾಹಿತ್ಯವೆಂಬುದು ಸಾರ್ಥಕವಾದೀತು, ಕಾವ್ಯ ಜಗತ್ತಿನಲ್ಲಿ ಮಕ್ಕಳ ಪದ್ಯಗಳನ್ನು ಫ್ರಾನ್ಸ್ ದೇಶದ ಪೆಕಾಟ್ ಎನ್ನುವ ಅತ ಮೊದಲು ಪ್ರಕಟಿಸಿದನೆಂದು ನಂಬಲಾಗಿದೆ . 'ಸಾಂಗ್ಸ್ ಆಫ್ ನರ್ಸರಿ' 1717 ರಲ್ಲಿ ಪ್ರಕಟವಾಯಿತು ಎಂದು ತಿಳಿದು ಬರುತ್ತದೆ. ಕನ್ನಡದಲ್ಲಿ 1862 ರಲ್ಲಿ ಹೊರಬಂದ "ಬಾಲ ಗೀತೆಗಳು" ಎನ್ನುವ ಮೊದಲ ಸಂಕಲನವನ್ನು ಸಿದ್ಧಪಡಿಸಿದವರು ಜಿ. ಮ್ಯಾಕ್ ಅವರು. ಆದರೆ ಅವರ ಈ ಕೃತಿ ಲಭ್ಯವಿಲ್ಲ. ಕೆರೋಡಿ ಸುಬ್ಬರಾಯರು, ಎಸ್. ಜಿ ನರಸಿಂಹಚಾರ್ಯರು ಇಂಗ್ಲೀಷ್ ಭಾಷೆಯಿಂದ ಮಕ್ಕಳಿಗಾಗಿ ಹಲವಾರು ಕವಿತೆಗಳನ್ನು ಅನುವಾದಿಸಿದ್ದಾರೆ. ಇವುಗಳಲ್ಲಿ ಭಾಷೆ, ಛಂದಸ್ಸುಗಳು ಹಳೆಯ ಶೈಲಿಯಲ್ಲಿದ್ದರೂ ಇವು ಮೊದಲ ಪ್ರಯತ್ನಗಳಾಗಿವೆ.

19ನೇ ಶತಮಾನದ ಉತ್ತರಾರ್ಧದಲ್ಲಿ ಮಕ್ಕಳಿಗಾಗಿಯೇ ಸಿದ್ಧಪಡಿಸಿದ ಪಠ್ಯ ಹಾಗೂ ಕ್ರಮಿಕ ಪುಸ್ತಕಗಳಲ್ಲಿ, ವಾಚಿಕೆಗಳಲ್ಲಿ ಮಕ್ಕಳ ಕವಿತೆಗಳು ಕಂಡುಬರುತ್ತವೆ. ಈ ಪ್ರಯತ್ನಗಳಲ್ಲಿ ಕ್ರೈಸ್ತ ಮಿಷಿನ–ರಿಗಳ ಪ್ರಯತ್ನ ಶ್ಲಾಘನೀಯ ಪಾತ್ರ. ಮೊದಮೊದಲಿಗೆ ದೇವರ ಪ್ರಾರ್ಥನೆ, ಆದರ್ಶಗಳ ಬೋಧನೆ ಇಂತವುಗಳ ಜೊತೆ ಕ್ಲಿಷ್ಟವಾದ ಪದಗಳ ಸಂಯೋಜನೆಗಳು ಕಾಣಿಸಿಕೊಂಡವು. ಬರಬರುತ್ತಾ ಕಾಲ ಮುಂದೆ ಸಾಗಿದಂತೆಲ್ಲ ಸರಳವಾದ ಹಾಗೂ ಸೊಗಸಾದ ರಚನೆಗಳು ಬಂದಿರುವುದು ಈಗ ಇತಿಹಾಸವಾಗಿದೆ. ಮುದ್ರಣಾಲಯಗಳು ಪ್ರಾರಂಭವಾದ ಮೇಲಂತೂ ಕನ್ನಡ ಸಾಹಿತ್ಯದಲ್ಲಿ



– ಶ್ರೀಮತಿ ಗೀತಾ ತಳಕಲ್
ಸಂಶೋಧನಾ ವಿದ್ಯಾರ್ಥಿನಿ,
ಕನ್ನಡ ಅಧ್ಯಯನ ವಿಭಾಗ,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.

ಮಕ್ಕಳ ಸಾಹಿತ್ಯಕ್ಕೆ ಹೊಸ ಕ್ರಾಂತಿಯೇ ನಡೆಯಿತು. ಜಯ ರಾಯಚಾರ್ಯರ ಅನುಕರಣ ಗೀತೆಗಳು, ಸೋಸಲೆ ಅಯ್ಯಾ ಶಾಸ್ತ್ರಿಗಳ ಪದ್ಯಗಳು ಗಮನಸೆಳೆಯುತ್ತವೆ. ಇಂಥವರು ಅನೇಕರು ಮಕ್ಕಳ ಕಾವ್ಯದ ಬೆಳಗಾಗಿ ನೆಲವನ್ನು ಹದ ಮಾಡಿದರು. ವಸ್ತು, ಭಾಷೆ, ತಂತ್ರಗಳಲ್ಲಿ ಪ್ರಯೋಗಗಳು ನಡೆಯುತ್ತಾ ಹೋದವು.

ಪಂಜೆ ಮಂಗೇಶರಾಯ, ಜಿ.ಪಿ. ರಾಜರತ್ನಂ ಮತ್ತು ಹೊಯ್ಸಳ ಈ ಮೂವರನ್ನು ಮಕ್ಕಳ ಸಾಹಿತ್ಯದ ರತ್ನತ್ರಯರು ಎನ್ನಬಹುದು. ಕುವೆಂಪು, ಶಿವರಾಂ ಕಾರಂತ, ದಿನಕರ ದೇಸಾಯಿ, ರಾಘವ, ಎಲ್. ಗುಂಡಪ್ಪ, ಮೇವುಂಡಿ ಮಲ್ಲಾರಿ, ಸಿದ್ದಯ್ಯ ಪುರಾಣಿಕ, ತುಂ. ಸೆ ಮಂಗೇಶರಾವ್, ಸಿ. ಫಾ. ಕಟ್ಟಿಮನಿ ಮೊದಲಾದವರು ಮಕ್ಕಳ ಕವಿತೆಗಳನ್ನು ರಚಿಸಿ ಮಕ್ಕಳನ್ನು ಖುಷಿಪಡಿಸಿದರು. ಜಿ.ಪಿ. ರಾಜರತ್ನಂ ಅವರ ಒಂದು ಚುಟುಕು ಹೀಗಿದೆ: ಗಡಗಡ ಓಡಿತು ರೈಲು! ನಿಮಿಷಕ್ಕೆ ಸಾವಿರ ಮೈಲು! ಸಾವಿರ ಮೈಲನ್ನು! ಮೀರುತ್ತ ಹೋಗಲು! ಆಗದು ರೈಲಿನ ಕೈಲು!.ಅವರ ರಚನೆಗಳಲ್ಲಿ ಇಂತಹ ಚೋಟಾರಿ ಮೋಟಾರಿ ಚುಟುಕಗಳ ಜೊತೆಗೆ ಮಕ್ಕಳನ್ನು ಕುಣಿಸಿ ತಣಿಸಬಲ್ಲ ಪದ್ಯಗಳಿವೆ. ಇಂತಹ ಹಿರಿಯರೆಲ್ಲ ಬಿತ್ತಿದ ನೆಲಕ್ಕೆ ನೀರೆರೆದು ಗೊಬ್ಬರ ಹಾಕಿದವರು ಮುಂದಿನ ಹಂತದ ಕವಿಗಳು.

ಶಂ.ಗು.ಬಿರಾದಾರ, ಸಿ.ಸು.ಸಂಗಮೇಶ, ಬಿ.ಎ.ಸನದಿ, ರಸಿಕ.ಪುತ್ತಿಗೆ, ಶಶಿಕುಮಾರ, ಫಳಕಳ ಸೀತಾರಾಮ ಭಟ್ಟ ಮುಂಡಾಜಿ ರಾಮಚಂದ್ರಭಟ್ಟ, ಶ್ರೀನಿವಾಸ ಶೆಟ್ಟಿ, ಈಶ್ವರ್ ಕಮ್ಮಾರ, ಚೆನ್ನವೀರ ಕಣವಿ, ಕಂಚಾಣಿ ಶರಣಪ್ಪ, ಎಂ .ವಿ ಸೀತಾರಾಮಯ್ಯ, ನೀ.ರೇ. ಹಿರೇಮಠ ಮೊದಲಾದವರು ಈ ಸಾಲಿಗೆ ಸೇರುತ್ತಾರೆ. ತಲೆಯೆತ್ತಿದ ಸಸಿಗೆ ಆಧಾರ ನೀಡಿ, ಅದನ್ನು ಪೋಷಿಸುತ್ತಿರುವವರು ಹಲವಾರು ಕವಿಗಳು. ಎಚ್.ಎಸ್ . ವೆಂಕಟೇಶಮೂರ್ತಿ, ಎನ್. ಎಸ್ .ಲಕ್ಷ್ಮೀನಾರಾಯಣ ಭಟ್, ಟಿ.ಎಸ್. ನಾಗರಾಜ ಶೆಟ್ಟಿ, ಎನ್ ಶ್ರೀನಿವಾಸ್ ಉಡುಪ, ಸಿ.ಎಂ. ಗೋವಿಂದ ರೆಡ್ಡಿ, ಸುಮಿತಿಂದ್ರ ನಾಡಿಗ, ಆರ್ .ಕೆ .ಶಾನುಭೋಗ, ಬಿ. ತಿಪ್ಪೇರುದ್ರಪ್ಪ ಮೊದಲಾದವರನ್ನು ಹೆಸರಿಸಬಹುದು.






ಮುಪ್ಪಿನ ಷಡಕ್ಷರಿಯ ( ಸು.1500) ತಿರುಕನ ಕನಸು, ಹಳೆಯದಾದರೂ ಅತ್ಯಂತ ಆಕರ್ಷಕ ಮತ್ತು ಅರ್ಥ–ಪೂರ್ಣವಾದ ಗೋವಿನ ಹಾಡು, ಕುವೆಂಪು ಅವರ ಬೊಮ್ಮನ ಹಳ್ಳಿಯ ಕಿಂದರಿ ಜೋಗಿ, ಎನ್ ಶ್ರೀನಿವಾಸ್ ಉಡುಪರವರ "ಕುಂಭಕರ್ಣನ ನಿದ್ದೆ" ಶ್ರೇಷ್ಠ ಮಟ್ಟದ ಕಥನ ಕವನಗಳು. ಎಚ್ ಎಸ್ ವೆಂಕಟೇಶಮೂರ್ತಿಯವರ ಘಟ್ಟದ ಯೋಗಿ ಕೂಡ ಚೆನ್ನಾಗಿದೆ. ಹಾಗೇಯೇ ಅನುಪಮ ನಿರಂಜನ ಅವರ ದಿನಕ್ಕೊಂದು ಕಥೆ ಕೂಡ ತುಂಬಾ ಅವಿಸ್ಮರಣೀಯವಾದದ್ದು.

# ಇಂಡಿ: ಆಪಲ್ ಶಾಲೆಯಲ್ಲಿ ರಾಮೋತ್ಸವ

ಉದಯರಶ್ಮಿ ನ್ಯೂಸ್



ಇಂಡಿ: ಪಟ್ಟಣದ ಪಟ್ಟಣದ ಆಪಲ್ ಇಂಟರ್ ನ್ಯಾಶನಲ್ ಶಾಲೆಯಲ್ಲಿ ಸೋಮವಾರ ಮಕ್ಕಳಿಗೆ ಶ್ರೀರಾಮ, ಲಕ್ಷ್ಮಣ, ಸೀತೆ, ರಾವಣ ಹನುಮಂತ ವೇಷ ಭೂಷಣ ತೊಡಿಸಿ ರಾಮಾಯಣದ ಕಿರುನಾಟಕ, ನೃತ್ಯ, ಕಥೆ, ಕವನ ಪ್ರಬಂಧ, ಹೀಗೆ ಅನೇಕ ಚಟುವಟಿಕೆಗಳನ್ನು ಮಾಡಿಸಲಾಯಿತು

ಶ್ರೀ ರಾಮನ ಫೋಟೋ ಪೂಜೆ ಮಾಡಿ ಮಕ್ಕಳಿಗೆ ಶ್ರೀರಾಮನಲ್ಲಿ ಇರುವ ಮೌಲ್ಯಗಳ ಕುರಿತು ತಿಳಿಸಲಾಯಿತು.

ಎಸ್.ಆರ್. ಬಗಲೂರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ದಿನಮಾನದಲ್ಲಿ ಮಕ್ಕಳಿಗೆ ನೈತಿ–ಕ ಗುಣಮಟ್ಟ ಕಡಿಮೆ ಆಗುತ್ತಿದ್ದು ಅವರಲ್ಲಿ ತಂದೆ, ತಾಯಿ ಗುರು, ಹಿರಿಯರನ್ನು ಪೂಜಿಸುವ ಗುಣ ಬರಬೇಕಾದರೆ ಹೀಗೆ ಅನೇಕ ಆಚರಣೆಗಳು ಮಾಡಿ ತಿಳಿಸಬೇಕು ಎಂದರು.

ಚಿದಾನಂದ ಬಿರಾದಾರ ಮಾತನಾಡಿದರು.

ಶಹನವಾಜ ಚಡಚಣಕರ ಉಪಸ್ಥಿತರಿದ್ದರು.

ವಿಜಯಕುಮಾರ ಇಮ್ಮನದ ನಿರೂಪಿಸಿದರು, ಸಲ್ಮಾ ಚಿಕ್ಕೇರಿ ವಂದಿಸಿದರು.

# "ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ"

## ಕಾವ್ಯರಶ್ಮಿ

– ರೇಖಾ ಅರುಣ್
("ನಮ್ಮ ಕಥಾ ಅರಮನೆ" ಬರಹಗಾರರು)



ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ
ನೋಡಲು ಕಾತುರ ನಿನ್ನಯ ಧಾಮ

ಶ್ರವಣನ ಹೆತ್ತವರ ಶಾಪ ದಶರಥನಿಗೆ
ಬುನಾದಿ ರಾಮನು ಹುಟ್ಟುವ ಘಳಿಗೆಗೆ

ಕೌಸಲ್ಯೆ ಕೈಕೇಯಿ ಸುಮಿತ್ರೆಯ ಕಣ್ಮಣಿ
ಭರತ ಶತ್ರುಘ್ನ ಲಕ್ಷ್ಮಣಗೆ ಭ್ರಾತೃತ್ವದ ಗಣಿ

ವಿಶ್ವಾಮಿತ್ರರ ಕರೆಗೆ ಹೊರಟರು ಕಾಡಿಗೆ
ನಾಟಿತು ರಾಮ ಬಾಣ ತಾಟಕಿಯ ಎದೆಗೆ

ಕಲ್ಲಾದ ಅಹಲ್ಯೆಗೆ ಬಂತು ಸ್ಪರ್ಶದಿ ಜೀವ
ಅಳಿಸಿದ ರಾಮ ಆಕೆ ಮನಸಿಗಾದ ನೋವ

ರಾಮನ ಹೆಜ್ಜೆಗೆ ಪಾವನ ಮಿಥಿಲಾ ನಗರಿ
ಮುರಿದು ಶಿವಧನಸ್ಸು ಸ್ವಯಂವರಕೆ ದಾರಿ

ಕೈಕೇಯಿ ನಂಬಿದ ಮಂಥರೆಯ ಕುಟಿಲತೆ
ಹಠ ಹಿಡಿದಳು ಆಗಬೇಕೆಂದು ರಾಜಮಾತೆ




ವನವಾಸಕೆ ಹೊರಟರು ಶ್ರೀರಾಮ ಜಾನಕಿ
ಹಾರಿತು ನೋವಲಿ ದಶರಥನ ಪ್ರಾಣಪಕ್ಷಿ

ಮಾಯಜಿಂಕೆಯ ಮೋಹದಿ ಸೀತಾಪಹರಣ
ಬಿಡುಗಡೆಗೆ ಹನುಮನ ಪ್ರಯತ್ನವು ಕಾರಣ

ರಾಮ ರಾವಣರಿಗೆ ನಡೆಯಿತು ಸಂಗ್ರಾಮ
ಆನ್ಯಾಯದ ವಿರುದ್ಧ ನ್ಯಾಯವಿತ್ತ ರಾಮ

ರಾವಣನ ಲಂಕೆಗೆ ಹನುಮ ಹೊತ್ತಿಸಿ ಬೆಂಕಿ
ಮತ್ತೆ ಬರುವಂತಾಯ್ತು ಅಯೋಧ್ಯೆಗೆ ಜಾನಕಿ

ಗೆದ್ದಳು ಸೀತೆ ಪಾತಿವ್ರತ್ಯ ಅಗ್ನಿ ಪರೀಕ್ಷೆಯಲಿ
ನಡೆಯಿತು ಪಟ್ಟಾಭಿಷೇಕ ಅದ್ದೂರಿಯಲಿ!

# ಪ್ರೇಮದ ಪ್ರತೀಕ ಶ್ರೀರಾಮ

## ಭಾವರಶ್ಮಿ



– ಡಾ. ವೆಂಕಟಕೃಷ್ಣ ಕೆ.
("ನಮ್ಮ ಕಥಾ ಅರಮನೆ" ಬರಹಗಾರರು)
ಉದಯರಶ್ಮಿ ದಿನಪತ್ರಿಕೆ

ಶ್ರೀ ರಾಮಚಂದ್ರನು ತನ್ನ ಜೀವಿತಾವಧಿಯಲ್ಲಿ ಎಂದಿಗೂ ಸತ್ಯ ಮತ್ತು ಧರ್ಮದ ಮಾರ್ಗದಿಂದ ವಿಚಲಿತನಾಗಲಿಲ್ಲ. ಅವತಾರ ಪುರುಷನಾಗಿದ್ದರೂ ಆತ ಆದರ್ಶ ಸುತ, ಪತಿ, ಸಹೋದರ, ಶಿಷ್ಯ, ಗೆಳೆಯ ಮತ್ತು ರಾಜನಾಗಿದ್ದನು. ಸಹಜ ಒಳ್ಳೆಯತನವನ್ನು ಹೊಂದಿ, ಯಾವಾಗಲೂ ಶಾಂತರೂಪನಾಗಿದ್ದು, ಸತ್ಯ, ನೈತಿಕತೆ ಮತ್ತು ಧರ್ಮದ ಅನುಯಾಯಿಯಾಗಿದ್ದನು. ಕ್ಷಮಾ ಗುಣಿ, ಬುದ್ಧಿವಂತ ಮತ್ತು ಅಪ್ರತಿಮ ಧೈರ್ಯಶಾಲಿಯಾಗಿ ಜಿತೇಂದ್ರಿಯನಾಗಿದ್ದನು. ಎಲ್ಲಾ ರೀತಿಯ ಆಯುಧಗಳ ಮೇಲೆ ಪಾಂಡಿತ್ಯ ಮತ್ತು ಕೌಶಲ್ಯವನ್ನು ಹೊಂದಿ, ಸಕಲ ವೇದಗಳನ್ನು ಕರಗತ ಮಾಡಿಕೊಂಡಿದ್ದನು. ಶ್ರೀ ರಾಮ ಉದಾತ್ತ, ಉದಾರ, ಗೌರವಾನ್ವಿತ ಮತ್ತು ವಿನಮ್ರನಾಗಿದ್ದು ಎಲ್ಲರಿಗೂ ಪ್ರೀತಿಪಾತ್ರನಾಗಿದ್ದನು.

ಎಲ್ಲರಿಗೂ ಸಮಾನ ಪ್ರೀತಿಯನ್ನು ತೋರುತ್ತಿದ್ದ ಮರ್ಯಾದಾ ಪುರುಷೋತ್ತಮ, ತನ್ನ ಶತ್ರುಗಳನ್ನೂ ದ್ವೇಷಿಸುತ್ತಿರಲಿಲ್ಲ. ವಿರಹಾಗ್ನಿಯಲ್ಲಿ ತಾನೇ ಬೆಂದಿದ್ದರೂ, ತನ್ನ ಅಂತರಂಗದ ಸಖಿ, ಪ್ರಾಣ ಸಮಾನ ಅರ್ಧಾಂಗಿನಿ ಸೀತೆಯನ್ನೂ ಅಗ್ನಿಪರೀಕ್ಷೆಗೆ ಒಡ್ಡಲು ತಡವರಿಸಿರಲಿಲ್ಲ. ಚೊಚ್ಚಿಲ ಗರ್ಭಿಣಿಯಾಗಿದ್ದರೂ ಸೀತೆಯನ್ನು ಲೋಕಾಪವಾದದ ಕಾರಣ ವನವಾಸಕ್ಕೆ ಕಳುಹಿಸಿ, ರಾಜಧರ್ಮವನ್ನು ಮೆರೆದ ನಿರ್ಲಿಪ್ತ ಅರಸ. ಇಂತಹ ಪ್ರಭಾವಶಾಲಿ ವ್ಯಕ್ತಿತ್ವದ ರಾಮನೊಳಗೆ ಅಗಾಧ ಶರಧಿಗಿಂತ ವಿಶಾಲ ಪ್ರೀತಿಯ ಸಾಗರವೇ ತುಂಬಿ ತುಳುಕುತಿತ್ತು. ಅದರ ಮಧುರ ತುಂತುರು ಹನಿಗಳ ಸಿಂಚನದಿಂದ ತೋಯ್ದು ಪಾವನರಾದವರೆಷ್ಟೋ ಪುಣ್ಯ ಜೀವಿಗಳು. ಕೇವಲ ಮಾನವರಷ್ಟೇ ಅಲ್ಲ, ಕಪಿಗಳು, ಪಕ್ಷಿಗಳು, ರಾಕ್ಷಸರೂ ರಾಮನಿಗೆ ನಿಷ್ಠರಾಗಿ, ಆತನ ಪ್ರೀತಿಗೆ ಪಾತ್ರರಾಗಿದ್ದರು. ಇವರ ಮಧ್ಯದಲ್ಲಿ ಅಳಿಲೊಂದು ಪ್ರೇಮದ ಪ್ರತೀಕ ಶ್ರೀ ರಾಮನ ವಿಶೇಷ ಪ್ರೀತಿಯ ಅನುಗ್ರಹ ಪಡೆಯಿತು. ತ್ರೇತಾಯುಗದಲ್ಲಿ ನಡೆದ ಈ ಘಟನೆಯ ಸಾಕ್ಷಿಯನ್ನು ನಾವು ಈ ಕಲಿಯುಗದಲ್ಲೂ ಕಾಣಬಹುದು!.

ಸೀತೆಯನ್ನು ಕಳೆದುಕೊಂಡ ಶ್ರೀರಾಮಚಂದ್ರನು ತನ್ನ ಸಹೋದರ ಲಕ್ಷ್ಮಣನೊಡನೆ ಅವಳನ್ನು ಹುಡುಕುತ್ತಾ ಕಿಷ್ಕಿಂದೆಯ ವಾನರ ರಾಜ ಸುಗ್ರೀವ, ಹನುಮಂತ, ಅಂಗದ ಮತ್ತು ಇತರ ಕಪಿ ಸೈನ್ಯದೊಂದಿಗೆ ಸಮುದ್ರದ ದಡಕ್ಕೆ ಬಂದು ಬೀಡು ಬಿಟ್ಟನು. ಸಮುದ್ರದ ಇನ್ನೊಂದು ದಡದಲ್ಲಿ ಸ್ವರ್ಣ ಲಂಕೆ! ಮಹಾವೀರ ಆಂಜನೇಯನು ಆ ಸಮುದ್ರವನ್ನೇ ಉಲ್ಲಂಘಿಸಿ ಲಂಕೆಯನ್ನು ತಲುಪಿ, ಸೀತಾ ಮಾತೆಯನ್ನು ವಿಚಾ–ರಿಸಿಕೊಂಡು, ತನ್ನ ಬಾಲಕ್ಕೆ ಇಟ್ಟ ಬೆಂಕಿಯಿಂದ ಲಂಕಾ ನಗರಿಯನ್ನು ದಹಿಸಿ, ತಿರುಗಿ ಬಂದು ಎಲ್ಲಾ ವರ್ತಮಾನಗಳನ್ನು ಅರುಹಿದ್ದನು. ಆಗ ತನ್ನೆಲ್ಲಾ ಸೇನೆಯನ್ನು ದಾಟಿಸಲು ರಾಮನು ಸಮುದ್ರದ ಮಧ್ಯದಲ್ಲಿ ದಾರಿ ಕೊಡಲು ವರುಣನನ್ನು ಕೇಳಿಕೊಂಡಾಗ, ಆತ ಪ್ರತ್ಯಕ್ಷನಾಗಿ ಪ್ರಭು ಶ್ರೀರಾಮನಿಗೆ ವಂದಿಸಿ ಬೆಟ್ಟದ ಕಲ್ಲುಗಳನ್ನು ಸಮುದ್ರದ ಮೇಲೆ ಹಾಕಿದರೆ ಅವು ತೇಲುವಂತೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡನು. ಆಗ ವಾನರ ರಾಜ ಸುಗ್ರೀವನು ರಾಮನ ಅಪ್ಪಣೆಯ ಮೇರೆಗೆ ತನ್ನ ಕಪಿ ಸೈನ್ಯದೊಡನೆ ಸುತ್ತಲಿರುವ ಬೆಟ್ಟದ ಅಗಾಧ ಕಲ್ಲುಗಳನ್ನು ತಂದು ಅವುಗಳನ್ನು ಸಮತಟ್ಟಾಗಿಸಿ ಅವುಗಳ ಮೇಲೆ 'ಶ್ರೀ ರಾಮ' ಎಂದು ಬರೆದು ನೀರಿನಲ್ಲಿ ಎಸೆದನು. ಮಹಾಮಹಿಮನ ಹೆಸರನ್ನು ಹೊತ್ತ ಕಲ್ಲುಗಳು ಸಮುದ್ರದ ಮೇಲೆ ತೇಲುತ್ತಾ ಒಂದಕ್ಕೊಂದು ಅಂಟಿ–ಕೊಂಡು ಸೇತುವೆಯ ಸ್ವರೂಪವನ್ನು ಪಡೆಯಲಾರಂಭಿಸಿದವು.



ಇದನ್ನೆಲ್ಲಾ ಕುತೂಹಲದಿಂದ ವೀಕ್ಷಿಸುತ್ತಿದ್ದ ಚಿಕ್ಕ ಅಳಿಲೊಂದು ಕಲ್ಲು ಬಂಡೆಯಷ್ಟು ಭಾರ ತನ್ನಿಂದ ಹೊತ್ತು ತರಲಾಗುವುದಿಲ್ಲ ಎಂಬ ಕಾರಣದಿಂದಾಗಿ ಸುಮ್ಮನೆ ಕುಳಿತು ನೋಡುತ್ತಾ ಕಾಲಹರಣ ಮಾಡುವುದಿಲ್ಲ. ತನ್ನಿಂದ ಹೊತ್ತು ತರಲು ಸಾಧ್ಯವಾಗಬಹುದಾದ ಮರಳನ್ನು ಸೇತುವೆಯ ನಿರ್ಮಾಣಕ್ಕೆ ಪೂರಕವಾಗಿ ಅದು ಒಟ್ಟುಗೂಡಿಸುತ್ತದೆ. ಇದಕ್ಕಾಗಿ ಅದು ತನ್ನ ಮೈಯನ್ನು ನೀರಲ್ಲಿ ಒದ್ದೆಮಾಡಿಕೊಂಡು, ದಡದ ಮರಳಲ್ಲಿ ಹೊರಳಾಡಿ, ಸೇತುವೆ ಕಟ್ಟುವ ಸ್ಥಳಕ್ಕೆ ಹೋಗುತ್ತದೆ. ಅಲ್ಲಿ ತನ್ನ ಮೈಯನ್ನು ಒದರಿ ಮೈಗೆ ಅಂಟಿ–ಕೊಂಡ ಮರಳನ್ನು ಬೀಳಿಸುತ್ತದೆ. ಹೀಗೆ ಪದೇ ಪದೇ ಮಾಡುತ್ತಿದ್ದ ಆ ಅಳಿಲಿನ ಸೇವೆ ರಾಮನ ಗಮನಕ್ಕೆ ಬರುತ್ತದೆ. ಆತನಿಗೆ ಆ ಪುಟ್ಟ ಅಳಿಲಿನ ಭಕ್ತಿ ಮತ್ತು ಸೇವೆ ವಿಶೇಷವಾಗಿ ಕಾಣುತ್ತದೆ. ಆ ಅಳಿಲಿನ ಮೇಲೆ ಆತನಿಗೆ ಅತೀವ



ಪ್ರೀತಿ ಹುಟ್ಟಿ, ಅದರ ಮೈಸವರಿ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತಾನೆ. ರಾಮನ ಕೈ ಬೆರಳುಗಳು ಸ್ಪರ್ಶಿಸಿದ ಭಾಗವೆಲ್ಲಾ ಸ್ವರ್ಣ ರೇಖೆಗಳಾದವು. ಅಂದಿನಿಂದ ರಾಮನ ಬೆರಳಿನ ಗುರುತುಗಳಂತೆ ಮೂರು ಶ್ವೇತ ಪಟ್ಟಿಗಳು ಅಳಿಲುಗಳ ಬೆನ್ನಮೇಲೆ ಶಾಶ್ವತವಾಗಿ ಉಳಿದವಂತೆ.

ಹೀಗೆ ರಾಮಾಯಣದಲ್ಲಿ, ತಮ್ಮ ತಮ್ಮ ಕರ್ಮಾನುಸಾರ ಶ್ರೀ ರಾಮನ ಪ್ರೀತಿಗೆ ಪಾತ್ರರಾಗಿ, ತಮ್ಮ ಜನ್ಮವನ್ನು ಪಾವನ ಮಾಡಿಕೊಂಡ ಹಲವಾರು ಪಾತ್ರಗಳಿವೆ. ಪ್ರಭು ಶ್ರೀ ರಾಮಚಂದ್ರನ ಪ್ರೀತಿಯ ಸ್ಪರ್ಶ ಮಾತ್ರದಿಂದಲೇ, ಎಷ್ಟೋ ಕಾಲದಿಂದ ಜಡವಾಗಿ ಬಿದ್ದಿದ್ದ ಮರ, ಗಿಡ ಕಲ್ಲುಗಳೂ ಶಾಪವಿಮೋಚನೆಗೊಂಡಿದ್ದವು. ರಾಮನ ಅನುಗ್ರಹದಿಂದ ಸಕಲ ಜೀವಜಂತುಗಳೂ ಕುಶಲವಾಗಿದ್ದು, ರಾಮರಾಜ್ಯದಲ್ಲಿ ಸುಖ, ಶಾಂತಿ, ನೆಮ್ಮದಿಗಳು ನೆಲೆಸಿದ್ದವು.